ಶ್ರೀ ಧರ್ಮಸಿಂಗ್ : (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, 1991ನೇ ಇಸವಿಯ ಕರ್ನಾಟಕ ಧಾರ್ಮಿಕ ಕಟ್ಟಡಗಳು ಮತ್ತು ಸ್ಥಳಗಳ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ

ರಾಜ್ಯದಲ್ಲಿರುವ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ

+ ಶ್ರೀ ಪಿ.ಜಿ.ಆರ್. ಸಿಂಧ್ಯ (ವಿರೋಧಪಕ್ಷದ ಉಪನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರತಕ್ಕ ಬರಗಾಲ ಪರಿಸ್ಥಿತಿಯ ಬಗ್ಗೆ ತಾವು ನಿನ್ನೆ ನನಗೆ ಅವಕಾಶ ಕೊಟ್ಟಿದ್ದು, ಈ ದಿವಸ ಅದನ್ನು ಮುಂದುವರಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾನು ನಿಮಗೆ ಮೊದಲನೆಯದಾಗಿ ಧನ್ಯವಾದಗಳನ್ನು ಅರ್ಪಿಸಿ, ಇವತ್ತು ರಾಜ್ಯದಲ್ಲಿರತಕ್ಕ ಭೀಕರ ಬರಗಾಲ ಪರಿಸ್ಥಿತಿ ಏನಿದೆ ಆ ಪರಿಸ್ಥಿತಿಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಕೆಲವು ವಿಷಯಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಬಹಳ ಮುಖ್ಯವಾಗಿ ಕಳೆದ 8-10 ವರ್ಷಗಳಿಂದ ನಮ್ಮರಾಜ್ಯದಲ್ಲಿ ಮಳೆ ಕಡಿಮೆಯಾಗಿದೆ. ಅದರ ಪರಿಣಾಮವಾಗಿ ಹಿಂದೆ ಸಹ ನಮ್ಮ ರಾಜ್ಯದಲ್ಲಿ ಇದೇ ಸದನದಲ್ಲಿ ಹಲವಾರು ಬಾರಿ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಬಂದಿರುವ ಬಗ್ಗೆ ಚರ್ಚೆಯಾಗಿದೆ. ನಾನು ಈಗತಾನೆ 1971-72-73-74ನೇ ವರ್ಷಗಳಲ್ಲಿ ಮಾನ್ಯ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲೂ ಸಹಿತ ಈ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಿರುವುದರ ಬಗ್ಗೆ ಮತ್ತು ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮಗಳ ಬಗ್ಗೆ ಸಹಿತ ನಾನು ಅವತ್ತು ನಡೆದಿರತಕ್ಕಂಥ ಚರ್ಚೆಯನ್ನು ನೋಡಿದ್ದೇನೆ. ಆಗ 1971-72ರಲ್ಲಿ ಅಂತರ್ಜಲಕ್ಕೆ ಯಾವುದೇ ರೀತಿಯ ತೊಂದರೆ ಇರಲಿಲ್ಲ, ಸಾಕಷ್ಟು ನೀರು ಇತ್ತು. 1970ರ ಹಿಂದೆ ನಮ್ಮ ರಾಜ್ಯದಲ್ಲಿ ಸಾಕಷ್ಟು ನೀರು ಮಳೆಯಾಗುತ್ತಿದ್ದರೂ 20 ವರ್ಷಗಳ ಹಿಂದಿನ ಮಾತು ಏನಿದೆ, ನೀರು ಇಲ್ಲದಿದ್ದರಿಂದ 1972ರಲ್ಲಿ ಎಂದೂ ಕಾಣದೆ ಇದ್ದಂಥ ಏನು ಒಂದು ಬರಗಾಲದ ಪರಿಸ್ಥಿತಿ ಬೀದರ್, ಕಲ್ಬುರ್ಗಿ, ರಾಯಚೂರು, ಬಿಜಾಪುರದಲ್ಲಿ ಅಥವಾ ಪಟ್ಟಣ ಪ್ರದೇಶಗಳಲ್ಲಿ ಇತ್ತು ಇವತ್ತು 20 ವರ್ಷಗಳ ನಂತರ, ಕಳೆದ ಹತ್ತು ವರ್ಷಗಳಲ್ಲಿ ವಿಶೇಷವಾಗಿ ಮಳೆ ಕಡಿಮೆಯಾಗಿರುವುದರಿಂದ ಎಂದೂ ಕಾಣದೇ ಇರತಕ್ಕಂಥ ಭೀಕರ ಬರಗಾಲವನ್ನು ನಾವು ಎದುರಿಸುತ್ತಿದ್ದೇವೆ. ಮಾನ್ಯ ಕಂದಾಯ ಸಚಿವರಾಗಿರತಕ್ಕಂಥ ಶ್ರೀ ಖರ್ಗೆಯವರು ಈ ದೃಷ್ಟಿಯಲ್ಲಿ ಏನೂ ಕೆಲಸ ಮಾಡಿಲ್ಲವೆಂದು ಹೇಳಿದರೆ ತಪ್ಪಾಗುತ್ತದೆ. ಏಕೆಂದರೆ, ನಿನ್ನೆ ದಿವಸ ಅವರು ಈ ವಿಷಯವನ್ನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಕೆಲಸ ಮಾಡಿರುವುದನ್ನಾದರೂ ಕೊನೇ ಪಕ್ಷ ಹೇಳದೇ ಹೋದರೆ ಕೆಲಸ ಮಾಡುವವರಿಗೆ ಉತ್ಸಾಹ ಇರುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇರತಕ್ಕಂಥ ಮಂತ್ರಿಗಳ ಪೈಕಿ ಸನ್ಮಾನ್ಯ ಖರ್ಗೆಯವರು ಈ ವಿಚಾರದಲ್ಲಿ ಪ್ರವಾಸವನ್ನು ಮಾಡಿದ್ದಾರೆ. ಮತ್ತು ಎಲ್ಲಿ ಸಾಧ್ಯವೋ ಅಲ್ಲಿ ಶಾಸಕರನ್ನು ಕರೆಸಿ ಮಾತನಾಡಿದ್ದಾರೆ. ಅವರು ಹೇಳಿರತಕ್ಕಂಥ ಸಲಹೆಗಳನ್ನು ಬರೆದು ಇಟ್ಟುಕೊಂಡಿದ್ದಾರೆ. ಅಧಿಕಾರಿಗಳಿಗೆ ಸೂಚನೆಗಳನ್ನು ಸಹಿತ ಕೊಟ್ಟಿದ್ದಾರೆ. ಅಧಿಕಾರಿಗಳಿಗೆ ಸಹಿತ ಎಲ್ಲಿ ಕುಡಿಯುವ ನೀರಿಲ್ಲ, ಅಲ್ಲಿ ನೀರನ್ನು ತಕ್ಷಣ ಕೊಡಬೇಕೆಂಬ ಮಾತನ್ನು ಹೇಳಿದ್ದಾರೆ. ಎಲ್ಲಿ ಮೇವಿಲ್ಲ, ಅಲ್ಲಿ ಮೇವು ಸಂಗ್ರಹ ಮಾಡುವುದಕ್ಕೆ ಕೆಲಸ ಮಾಡಿ ಎಂದು ಹೇಳಿದ್ದಾರೆ. ನಮ್ಮ ಜಿಲ್ಲೆಗೆ ಸಹಿತ ಬಂದುಹೋಗಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ.

ಅಧ್ಯಕ್ಷರು: ನಿಮ್ಮ ಜಿಲ್ಲೆ ಬಹಳ ದೂರ ಏನೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಆದರೂ ಬಂದು ಹೋಗಿದ್ದಾರೆ. ಅವರು ಹೆಚ್ಚಾಗಿ ಗುಲ್ಬರ್ಗಾದಲ್ಲಿ ಇರುತ್ತಿದ್ದರೂ ಸಹ ಅಷ್ಟು ದೂರದಿಂದ ಬಂದು ಹೋಗಿದ್ದಾರೆ.

ಆದರೆ ಈ ಸರ್ಕಾರ ಇವತ್ತು ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಂಡು ಯಾವರೀತಿ ಸಮರೋಪಾಯದ ರೀತಿಯಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕಿತ್ತೋ ಆ ಪ್ರಯತ್ನ ಮಾಡಿಲ್ಲವೆಂದು ಬಹಳ ದುಃಖದಿಂದ ಈ ಮಾತನ್ನು ಹೇಳಬೇಕಾಗಿದೆ. ಇವತ್ತು ಏನಾಗಿದೆ ಎಂದರೆ, ಎಲ್ಲ ಕೆರೆಗಳೂ ಬತ್ತಿ ಹೋಗಿವೆ. ರಾಜ್ಯದ ಯಾವ ಭಾಗಕ್ಕೆ ಹೋದರೂ ಸಹಿತ ಕೆರೆಗಳಲ್ಲಿ ನೀರು ಇಲ್ಲ. ನಾವೆಲ್ಲ ಮನುಷ್ಯರು ಕುಡಿಯುತಕ್ಕಂಥ ನೀರಿನ ಬಗ್ಗೆ ಚರ್ಚೆ ಮಾಡಿದೆವು. ಆದರೆ ಇವತ್ತು ಜಾನುವಾರುಗಳು ಇರಲಿ, ಪಕ್ಷಿಗಳು ಸಹಿತ ಕುಡಿಯುವುದಕ್ಕೆ ನೀರು ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಅನೇಕ ಜಿಲ್ಲೆಗಳಲ್ಲಿ ಬಂದಿದೆ. ನಾನು ಬಹಳ ದೂರದ ಮಾತನ್ನು ಹೇಳುವುದಿಲ್ಲ. ನಮ್ಮ ಬೆಂಗಳೂರು ಜಿಲ್ಲೆಯಲ್ಲಿ ಬೋರ್‌ವೆಲ್‌ಗಳ ಪಕ್ಕದಲ್ಲಿ ಮಣ್ಣಿನಲ್ಲಿ ಗುಂಡಿಗಳನ್ನು ತೋಡಿದ್ದಾರೆ. ಆ ಊರಿನ ಜನ ಬಂದು ಆ ನೀರನ್ನು ಒತ್ತುತ್ತಾರೆ, ಆಗ ಅಲ್ಪ ಸ್ವಲ್ಪ ನೀರು ಬಂದರೆ, ಆ ಗುಂಡಿಯೊಳಗೆ ಪಕ್ಷಿಗಳು ಬಂದು ನೀರನ್ನು ಕುಡಿಯತಕ್ಕಂಥ ಒಂದು ಸಂದರ್ಭ ಬಂದಿದೆ. ಇದರ ಜೊತೆಗೆ 15-20ವರ್ಷಗಳಿಂದ ಇದ್ದಂಥ ತೆಂಗಿನಮರಗಳು ಅನೇಕ ಕಡೆಗಳಲ್ಲಿ ಒಣಗಿ ಹೋಗತಕ್ಕಂಥ ಪರಿಸ್ಥಿತಿ ಸಹಿತ ಇವತ್ತು ಬಂದಿದೆ. ಇಂತಹ ಒಂದು ಸ್ಥಿತಿಯಲ್ಲಿ ಕುಡಿಯುವುದಕ್ಕೆ ನೀರಿಲ್ಲ ಇನ್ನು ಉದ್ಯೋಗ ಕೊಡತಕ್ಕಂಥ ಮಾತು ಆಮೇಲೆ ಆಯಿತು. ಉದ್ಯೋಗದ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ, ತಾವು ಹೇಳಿಕೆಯಲ್ಲಿ ಏನು ಹೇಳಿದ್ದೀರಿ ಎಂದರೆ ಅಭಾವ ಪೀಡಿತದಿಂದ ಬೆಳೆ ಬೆಳೆಯಲಾಗದೆ ತಮ್ಮ ಜೀವನೋಪಾಯವನ್ನು ಕಳೆದುಕೊಂಡ ವ್ಯಕ್ತಿಗಳಿಗೆ ಉದ್ಯೋಗ ದೊರಕಿಸಿ ಕೊಡುವುದು. ಇದು ಕೇವಲ ಪತ್ರಿಕೆಯಲ್ಲಿ ಹೇಳುವುದಕ್ಕೆ ಸಾಧ್ಯವೇ ಹೊರತು ವಸ್ತು ಸ್ಥಿತಿಯಲ್ಲಿ ಸರ್ಕಾರದ ಕನಿಷ್ಟ ಕೂಲಿಯಲ್ಲಿ ಯಾರು ಬರುತ್ತಾರೆ? ಎಷ್ಟು ಜನರಿಗೆ ಕೂಲಿ ಕೊಡುವುದಕ್ಕೆ ಸಾಧ್ಯವಿದೆ? ಇದು ಸಾಧ್ಯಾವಾಗದೆ ಇರುವ ಮಾತು.

ಅಧ್ಯಕ್ಷರು: ಇನ್ನೂ ಟೈಮ್ ಬೇಕಲ್ಲ ನಿಮಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಇನ್ನು ಪ್ರಾರಂಭವೇ ಮಾಡಿಲ್ಲ...

ಅಧ್ಯಕ್ಷರು: ಈಗ ನಿಮಗೆ ಟೈಮ್ ಬೇಕು ತಾನೆ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಬೇಕು ಸ್ವಾಮಿ.

ಅಧ್ಯಕ್ಷರು: ಈಗ ಸದನ ಮುಂದುವರೆದು ಮತ್ತೆ ಎರಡು ಗಂಟೆ ಹತ್ತು ನಿಮಿಷಕ್ಕೆ ಸಮಾವೇಶವಾಗುತ್ತದೆ.

(ಸದನವು 1 ಗಂಟೆ 9 ನಿಮಿಷಕ್ಕೆ ಮುಕ್ತಾಯವಾಗಿ ಪುನಃ 2-10 ಗಂಟೆಗೆ ಸೇರಲು ನಿರ್ಧರಿಸಿತು)

ಸದನವು ಪುನಃ 2-25ಕ್ಕೆ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು.

ಉಪಾಧ್ಯಕ್ಷರು: ಮಾನ್ಯ ಸಿಂಧ್ಯರವರು ಅರ್ಧ ಮಾತನಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಅರ್ಧ ಮಾತನಾಡಲಿಲ್ಲ ಪ್ರಾರಂಭ ಮಾಡುತ್ತಿದ್ದೆ ಅಷ್ಟೆ.

ಉಪಾಧ್ಯಕ್ಷರು: 10 ನಿಮಿಷ ಮಾತನಾಡಿದ್ದೀರಿ, ಮುಂದುವರಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೆ, ನೆನ್ನೆ ದಿವಸ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡತಕ್ಕಂತಹ ಸಂದರ್ಭದಲ್ಲಿ ಸರಕಾರದ ಪರವಾಗಿ ಮಾನ್ಯ ಖಾರ್ಗೆಯವರು ನಮಗೆ ಆಶ್ವಾಸನೆ ಕೊಟ್ಟಿದ್ದರು. ನಾವು ಮಂತ್ರಿಗಳನ್ನು ಕರೆಸುತ್ತೇವೆಂದು ಹೇಳಿದ್ದರು. ಇವತ್ತು ಇಲ್ಲಿ ಇಬ್ಬರು ಮಂತ್ರಿಗಳಿದ್ದೀರಿ. ಶಾಸಕರು

ಮಾತನಾಡುತ್ತಾರೆ, ಅವರು ಮಾತನಾಡುವುದನ್ನು ಸಂಬಂಧಪಟ್ಟ ಮಂತ್ರಿಗಳು ಕೇಳಬೇಕು ಕೇಳಿ ಏನಾದರೂ ಕ್ರಮ ತೆಗೆದು ಕೊಳ್ಳಬೇಕೆಂಬ ವಿವೇಚನೆ ಸರಕಾರಕ್ಕೆ ಇದೆಯೋ ಆ ವಿವೇಚನೆ ಸರಕಾರಕ್ಕೆ ಇಲ್ಲವೋ ಗೊತ್ತಿಲ್ಲ. ಶಾಸಕರು ಕೆಲಸವಿಲ್ಲದೆ ಬಂದು ಮಾತನಾಡುತ್ತಾರೆ, ಪ್ರಚಾರ ಗಿಟ್ಟಿಸಿಕೊಳ್ಳುಲಿಕ್ಕೆ ಮಾತನಾಡುತ್ತಾರೆ ಎಂಬ ಭಾವನೆ ಸರಕಾರಕ್ಕಿದೆಯೋ ಏನೋ ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಖರ್ಗೆಯವರು ಬರಗಾಲ ಪೀಡಿತ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಬಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: 21 ಜನ ಮಂತ್ರಿಗಳಿದ್ದಾರೆ. ನಿಮ್ಮ ಕಡೆ ಸುಮಾರು 182-185 ಜನ ಸದಸ್ಯರಿಗೆ ಎಷ್ಟು ಜನ ಇರಬೇಕೋ ಅಷ್ಟು ಇಲ್ಲಿ ಇಲ್ಲ ಅದು ಹೋಗಲಿ. ನಮ್ಮ ರಾಜ್ಯಕ್ಕೆ ಮಂತ್ರಿಗಳ ಬರ ಕೂಡ ಇದೆ. 22 ಜನ ಮಂತ್ರಿಗಳು ಇರಬಹುದು. ಆದರೆ ಇಲ್ಲಿ ಇಂದು ಇಬ್ಬರು ಮಂತ್ರಿಗಳು ಇದ್ದಾರೆ. ಮಂತ್ರಿಗಳನ್ನು ಕರೆಸಿ ಎಂದು ನಾವು ನಿನ್ನೆಯಿಂದ ಹೇಳುತ್ತಿದ್ದೇವೆ. ವಿಧಾನ ಪರಿಷತ್ತೂ ನಡೆಯುತ್ತಿಲ್ಲ. ಮಂತ್ರಿಗಳೆಲ್ಲಾ ಎಲ್ಲಿ ಹೋದರು ಎನ್ನುವುದೇ ದೊಡ್ಡ ಸಮಸ್ಯೆಯಾಗಿದೆ. ಈ ಮಟ ಮಟ ಮಧ್ಯಾಹ್ನದಲ್ಲಿ ಎಲ್ಲಿ ಹೋಗಿದ್ದಾರೆಂಬುದೇ ದೊಡ್ಡ ಸಮಸ್ಯೆಯಾಗಿದೆ. ತಾವೊಬ್ಬರು ಇದ್ದೀರಿ ಶಂಭುನಾಥ್ ಒಬ್ಬರು ಇದ್ದಾರೆ. ನಿಮ್ಮ ಸದಸ್ಯರಿಗಾದರೂ ಕಳಕಳಿ ಬೇಡವೆ ಈ ವಿಷಯ ಎಷ್ಟು ಪ್ರಾಮುಖ್ಯತೆ ಪಡೆದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಿನ್ನೆ ಮಂತ್ರಿಗಳನ್ನು ಕರೆಸಿ, ಕರೆಸಿ ಎಂದು ಮಾನ್ಯ ಬೈರೇಗೌಡರು, ಸಿಂಧ್ಯರವರು ಕೂಡ ಹೇಳಿದ್ದರು. ಇವತ್ತು ಕೆಲವು ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಎಂಗೇಜ್ ಆಗಿದ್ದಾರೆ, ಈಗ ಬರುತ್ತಾರೆ. ತಾವು ಹೇಳಿ, ನಾನು ಬರೆದು ಕೊಳ್ಳುತ್ತಿದ್ದೇನೆ. ಸಂಬಂಧಪಟ್ಟವರಿಗೆ ತಿಳಿಸುತ್ತೇನೆ. ಮತ್ತೆ ಅವರನ್ನು ಕರೆಸಿದ ಮೇಲೆ ಅದೇ 1-2 ತಾಸು ಆಗಬಾರದು.

ಶ್ರೀ ವಾಟಾಳ್ ನಾಗರಾಜ್: ಇದು ಅತ್ಯಂತ ಪ್ರಾಮುಖ್ಯವಾದಂತಹ ಸಭೆ. ನಿನ್ನೆ ಜಂಟಿ ಅಧಿವೇಶನ ಆಯಿತು, ಇಂದು ಎಷ್ಟು ಬಿಸಿ ಬಿಸಿ ಯಾಗಿ ಇರಬೇಕಿತ್ತು. ಆದರೆ ಅಷ್ಟು ಬಿಸಿಯಾಗಿ ಇಲ್ಲ, ಇಂದು 25 ನಿಮಿಷ ತಡವಾಗಿ ಸೇರಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಆಡಳಿತ ಪಕ್ಷದ ಮುಖ್ಯ ಸಚೇತಕರನ್ನು ನೋಡಿದರೆ ನನಗೆ ಅಯ್ಯೋ ಎಂದು ಎನಿಸುತ್ತದೆ. ಅವರು ಮಂತ್ರಿಗಳನ್ನು ಕರೆಸುವುದಕ್ಕೆ ಬಹಳ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ರಾಜ್ಯಕ್ಕೆ ಇಂತಹ ದುರ್ದೈವ ಬರಬಾರದಾಗಿತ್ತು.

ಶ್ರೀಮತಿ ಚಂದ್ರಪ್ರಭಾ ಅರಸು: ಮಾನ್ಯ ಸಿಂಧ್ಯರವರೆ, ತಮ್ಮ ಕಡೆ ಕೂಡ ತಕ್ಷಣಕ್ಕೆ ಮುಖಂಡರು ಅಭಾವ ಇದೆ. ಬರಗಾಲ ಬರಗಾಲ ಎಂದು ಹೇಳಿ ಅದನ್ನು ನಮಗೆ ಬಳುವಳಿಯಾಗಿ ಕೊಟ್ಟಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೆ ಸರಕಾರದ ಈ ಧೋರಣೆ ಏನು ಇದೆ ಅದು ಸರಿಯಲ್ಲ, ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಇರಲಿಲ್ಲ. ಸಾಮಾನ್ಯವಾಗಿ ಮುಖ್ಯ ಮಂತ್ರಿಗಳು ಇಲ್ಲದೇ ಹೋದರೆ ಪರವಾಗಿಲ್ಲವೆಂದು ಹೇಳಬಹುದು. ಇಂದು ಮುಖ್ಯಮಂತ್ರಿಗಳೂ ಸಹ ಇಲ್ಲಿದ್ದಾರೆ. ಬರಗಾಲದ ಬಗ್ಗೆ ಮಾತನಾಡುತ್ತಿದ್ದಾರೆಂದು ಅವರಿಗೆ ಗೊತ್ತಿದ್ದರೂ ಸಹ ಮಂತ್ರಿಗಳು ಬರಲಿಲ್ಲವೆಂದರೆ ನಾವು ಇನ್ನೇಕೆ ಮಾತನಾಡಬೇಕು. ಇಲ್ಲಿ ನಿಮಗೆ ವರದಿಯನ್ನು ಒಪ್ಪಿಸುವುದಕ್ಕೆ ನಾವು ಮಾತನಾಡಬೇಕಾಗಿದೆ. ಸರಕಾರದ ಈ ಧೋರಣೆಯನ್ನು ನಾವು ಪ್ರತಿಭಟಿಸಿ ನಾವು ಬಂದು ಬಂದು ಧರಣಿ ಕುಳಿತುಕೊಳ್ಳಬಹುದು. ಆದರೆ ಧರಣಿ ಕುಳಿತುಕೊಳ್ಳುವುದಕ್ಕೆ ನಾವು ಹೋಗುತ್ತಿಲ್ಲ. ಸರಕಾರದ ಈ ಧೋರಣೆ ಅತ್ಯಂತ ಖಂಡನೀಯವಾಗಿರತಕ್ಕಂಥಾದ್ದು. ನನ್ನ ಹತ್ತಿರ ಇದರ ಬಗ್ಗೆ ಹೇಳಲು ಶಬ್ದಗಳೇ ಇಲ್ಲ. ಈ ಪ್ರಜಾಪ್ರಭುತ್ವದ ಪದ್ಧತಿ ಮತ್ತು ಶಾಸಕಾಂಗದ ನೀತಿ ಏನು ಇದೆ, ಅದಕ್ಕೆ ವಿರುದ್ಧವಾಗಿರತಕ್ಕಂಥಾದ್ದು

ಇದಾಗಿದೆ. ಇದರ ಬಗ್ಗೆ ಕೆಟ್ಟ ಶಬ್ದಗಳನ್ನು ಉಪಯೋಗಿಸಿ ನನ್ನ ನಾಲಿಗೆಯನ್ನು ಹಾಳು ಮಾಡಿಕೊಳ್ಳುವುದಕ್ಕೆ ನಾನು ತಯಾರಾಗಿಲ್ಲವೆಂದು ಅಷ್ಟೇ ಹೇಳುತ್ತೇನೆ. ಮಾನ್ಯ ಖರ್ಗೆಯವರು ಮಾಡಿರತಕ್ಕಂತಹ ಒಂದು ಹೇಳಿಕೆ ಬಗ್ಗೆ ನಾನು ಪ್ರಾರಂಭದಲ್ಲಿ ಎರಡು ಮಾತುಗಳನ್ನು ಹೇಳಬಯಸುತ್ತೇನೆ.

ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಸದನಕ್ಕೆ ಹೊಸದಾಗಿ ಬಂದಿಲ್ಲ. ಅವರು 1972ರಿಂದ ಈ ಸದನದ ಸದಸ್ಯರಾಗಿದ್ದಾರೆ. 1972ನೇ ಇಸವಿಯಲ್ಲಿ ಈ ಸದನದ ಸದಸ್ಯರಾಗಿ ಮಾನ್ಯ ಹುಚ್ಚಮಾಸ್ತಿಗೌಡರು ಸಹ ಇದ್ದರು. ಮಾನ್ಯ ಹುಚ್ಚಮಾಸ್ತಿಗೌಡರು ಆ ಸಂದರ್ಭದಲ್ಲಿ ಈ ಕಂದಾಯ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿದ್ದರು. ನಾನು ಇವತ್ತು 1972-73, 1973-74ರ ಬರಗಾಲ ಪರಿಸ್ಥಿತಿಗೂ ಇವತ್ತು ಭೀಕರ ಬರಗಾಲ ಪರಿಸ್ಥಿತಿ ಇದೆ. 1972ನೇ ಇಸವಿಯಲ್ಲಿ ಅಂತರ್‌ಜಲ ಇತ್ತು. ಇವತ್ತು ಅಂತರ್‌ಜಲ ಇಲ್ಲ. ಆ ಸಂದರ್ಭದಲ್ಲಿ ದಿವಂಗತ ದೇವರಾಜಅರಸ್‌ರವರು ಮುಖ್ಯಮಂತ್ರಿಗಳಾಗಿದ್ದರು. ಆಗ ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಪರಾಂಭರಿಸಬೇಕೆಂದು ತಮಗೆ ಒಪ್ಪಿಸುತ್ತಿದ್ದೇನೆ. ಅದರಲ್ಲಿ ಎಷ್ಟೊಂದು ವಿಚಾರಗಳನ್ನು ಹೇಳಿದ್ದಾರೆಂದರೆ, ಏನೇನು ಮಾಡಬೇಕು, ಮೇವು ಎಲ್ಲಿಂದ ತರಬೇಕು, ಕೂಲಿ ಇಲ್ಲದವರಿಗೆ ಕೂಲಿಯನ್ನು ಯಾವರೀತಿ ಕೊಡಬೇಕು, ಸಾಂಕ್ರಾಮಿಕ ರೋಗಗಳಾದ ಕಾಲರ, ಆಮಶಂಕೆ ರೋಗಗಳು ಬರದಹಾಗೆ ಏನು ಮಾಡಬೇಕು, ಆಹಾರಧಾನ್ಯಗಳನ್ನು ಎಲ್ಲಿಂದ ತರಬೇಕು, ಅದನ್ನು ಯಾವರೀತಿ ಶೇಖರಣೆ ಮಾಡಬೇಕು, ಯಾವ ರಾಜ್ಯಗಳಿಂದ ಹುಲ್ಲನ್ನು ತರಬೇಕು, ಯಾವ ರಾಜ್ಯದಿಂದ ಬಾರ್ಲಿ ಹೊಟ್ಟನ್ನು ತರಬೇಕು. ಇದೆಲ್ಲ ಸಂಕ್ಷಿಪ್ತವಾಗಿ ಕ್ರೋಢೀಕೃತವಾಗಿರತಕ್ಕ ಎಂಟು ಪುಟಗಳ ಹೇಳಿಕೆಯನ್ನು ಸದನದ ಮುಂದಿಟ್ಟಿದ್ದಾರೆ. ಆದರೆ ತಾವು ಏನು ಹೇಳಿದ್ದೀರಿ, ರಾಜ್ಯದ 130 ತಾಲ್ಲೂಕುಗಳಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿದೆ ನೀರಿನ ಅಭಾವವಿದೆ, ಗೋವುಗಳಿಗೆ ಮೇವು ಇಲ್ಲ, ಕೂಲಿ ಮಾಡುವವರಿಗೆ ಕೆಲಸವಿಲ್ಲವೆನ್ನುವ ಹೇಳಿಕೆಯನ್ನು ಕೊಟ್ಟಿದ್ದೀರಿ ಹೊರತು ನೀವು ತೆಗೆದು ಕೊಂಡಿರತಕ್ಕ ಕಾರ್ಯಕ್ರಮಗಳೇನು? 1972ನೇ ಇಸವಿಯಲ್ಲಿ ಮೂರು ತಿಂಗಳಿನಲ್ಲಿ 22 ಕೋಟಿ ರೂಪಾಯಿಗಳನ್ನು ಕೇಂದ್ರಸರ್ಕಾರ ನೆರವು ಇಲ್ಲದೆ ಖರ್ಚು ಮಾಡಿದ್ದಾರೆ. ಇವತ್ತು ಪಕ್ಷಿಗಳು ಸಹ ಕುಡಿಯುವುದಕ್ಕೆ ನೀರಿಲ್ಲ. ಮಾವಿನಮರ, ತೆಂಗಿನಮರ, ಹುಣಸೇಮರ, ಕತ್ತಾಳೆ ಇವುಗಳನ್ನು ಬಿಟ್ಟರೆ ಉಳಿದ ಎಲ್ಲಾ ಮರಗಳು ಒಣಗುತ್ತಿವೆ. ಮರಗಳ ಬುಡದಲ್ಲೂ ಸಹ ನೀರಿಲ್ಲ. ಇಂತಹ ಒಂದು ಪರಿಸ್ಥಿತಿ ಇದ್ದು ಭೀಕರ ಬರಗಾಲವಿದೆ. ನಾನು ಏನು ಹೇಳಬೇಕು. ನಾವು ಮಾತನಾಡುವುದನ್ನು ಕೊನೆಯ ಪಕ್ಷ ಕೇಳತಕ್ಕ ಸೌಜನ್ಯವನ್ನು ತೋರದೆ ಇರತಕ್ಕ ಸರ್ಕಾರವಿದೆ. ನಿಜವಾಗಿಯೂ ಇದು ನಾಚಿಕೆಗೇಡಿನ ವಿಷಯವೆಂದು ಹೇಳಬೇಕಾಗುತ್ತದೆ. ಅಧಿಕಾರಿಗಳು ನಿಮ್ಮ ಮಾತನ್ನು ಕೇಳುತ್ತಾರೆಯ? ಯಾರು ನಿಮ್ಮ ಮಾತನ್ನು ಕೇಳುತ್ತಾರೆ?

ನಿಮ್ಮ ಮಾತನ್ನು ಯಾರೂ ಕೇಳುವುದಿಲ್ಲ. ಏತಕ್ಕೆ ಕೇಳುವುದಿಲ್ಲವೆಂದರೆ, ಆರಾರು ತಿಂಗಳಿಗೊಬ್ಬರು ಅಧಿಕಾರಿಯನ್ನು ನೀವು ಬದಲಾವಣೆ ಮಾಡುತ್ತಾ ಇದ್ದೀರಿ. ಈ ವರ್ಷಗಳಲ್ಲಿ ರಾಜ್ಯಪಾಲರ ಆಡಳಿತದಲ್ಲಿ ಅಧಿಕಾರಿಗಳ ವರ್ಗಾವಣೆಯಾಯಿತು. ನಂತರ ವೀರೇಂದ್ರ ಪಾಟೀಲರು ಬಂದು ಆಗ ಅಧಿಕಾರಿಗಳ ವರ್ಗಾವಣೆಯಾಯಿತು. ಅದಾದನಂತರ ಮಂತ್ರಿಮಂಡಲ ವಿಸ್ತರಣೆಯಾಯಿತು. ಮಂತ್ರಿಗಳ ಮರ್ಜಿಯಂತೆ ಅಗೊಂದು ವರ್ಗಾವಣೆಯಾಯಿತು. ಈಗ ಹೊಸದಾಗಿ ಮುಖ್ಯಮಂತ್ರಿಗಳು ಬಂದಿದ್ದಾರೆ, ಈಗೊಂದು ವರ್ಗಾವಣೆಯಾಗುತ್ತಿದೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ವರ್ಗಾವಣೆ ಮಾಡತಕ್ಕ ಸರ್ಕಾರ ನಿಮ್ಮದು. ಏತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಬರಗಾಲ ಪರಿಸ್ಥಿತಿ ಭಯಂಕರವಾಗಿದೆ, ಅದನ್ನು ಯುದ್ಧದೋಪಾದಿಯಲ್ಲಿ ಎದುರಿಸಬೇಕಾಗುತ್ತದೆ.

ಬಡವರ ಪರವಾಗಿರತಕ್ಕ ಅಧಿಕಾರಿಗಳನ್ನು ಅಲ್ಲಿ ಕೂರಿಸಬೇಕು. ಇವತ್ತು ಏನಾಗುತ್ತಿದೆ, ಒಬ್ಬ ಶಾಸಕರಿಗೆ ನಿಮ್ಮ ಜಿಲ್ಲಾಧಿಕಾರಿಗಳು ಗೌರವ ಕೊಡುವುದಿಲ್ಲವೆಂದರೆ, ಇಡೀ ಸದನಕ್ಕೆ ಅದು ಅವಮಾನ. ಒಬ್ಬ ಜಿಲ್ಲಾಧಿಕಾರಿ ಶಾಸಕರಿಗೆ ನೀನು ಹೇಳತಕ್ಕದ್ದು ನಾನ್ಸೆನ್ಸ್ ಶಬ್ದ ಹೇಳಬೇಕಾದರೆ ನಮ್ಮ ಪರಿಸ್ಥಿತಿ ಯಾವಮಟ್ಟಕ್ಕೆ ಹೋಗಿದೆ, ಚುನಾಯಿತ ಪ್ರತಿನಿಧಿಗಳನ್ನು ಯಾವಮಟ್ಟಕ್ಕೆ ತಂದಿದ್ದೀರಿ ಎನ್ನುವುದನ್ನು ವಿಚಾರ ಮಾಡಿ. ನೀವು ಅದನ್ನು ಮಾಡಿ. ಇದನ್ನು ಮಾಡಿ ಎಂದು ಹೇಳಿ ಬರುತ್ತೀರಿ, ಯಾರು ನಿಮ್ಮ ಮಾತನ್ನು ಕೇಳುತ್ತಾರೆನ್ನುವುದನ್ನು ದಯವಿಟ್ಟು ಯೋಚನೆ ಮಾಡಿ. ನೀವು ನಿಮ್ಮ ಹೇಳಿಕೆಯಲ್ಲಿ ಇದುವರೆಗೆ 36ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆನ್ನುವ ಮಾತನ್ನು ಹೇಳಿದ್ದೀರಿ. ಅದರಲ್ಲಿ ಕೇಂದ್ರಸರ್ಕಾರದಿಂದ ವಿಕೋಪ ಪರಿಹಾರನಿಧಿಯಿಂದ ಬಂದಿರತಕ್ಕದ್ದು 20ಕೋಟಿ ರೂಪಾಯಿ. ರಾಜ್ಯ ಸರ್ಕಾರದಿಂದ ಮ್ಯಾಚಿಂಗ್ ಆಗಿ ಕೊಟ್ಟಿರತಕ್ಕದ್ದು ಏಳು ಕೋಟಿ. 30-35 ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡಿದ್ದೀರಿ. ಅದರಲ್ಲಿ ನಾನು ಸ್ವಲ್ಪ ಸೋಡಿ ಬಿಡುತ್ತೇನೆ. 35ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆಂದು ತೆಗೆದುಕೊಂಡರೂ, ನೀವು ಹೇಳಿರತಕ್ಕ 130ತಾಲ್ಲೂಕುಗಳು ಬೇಡ 100 ತಾಲ್ಲೂಕುಗಳಿಗೆ ಹಂಚಿದರೆ, ಸರಾಸರಿ ಒಂದು ತಾಲ್ಲೂಕಿಗೆ 3 ಲಕ್ಷದ 60 ಸಾವಿರ ರೂಪಾಯಿ ಬರುತ್ತದೆ.

ದನಕರುಗಳಿಗೆ ಮೇವಿರಲಿ, ಬೀಜ ಇರಲಿ, ಮತ್ತೊಂದು ಇರಲಿ, ಕೂಲಿಗಾಗಿ ಕೊಡತಕ್ಕಂಥ ಕೆಲಸ ಇರಲಿ, 12 ಬೋರ್‌ವೆಲ್‌ಗಳನ್ನು ಹಾಕಬಹುದು. 12 ಬೋರ್‌ವೆಲ್‌ಗಳನ್ನು ಬರಗಾಲ ಇರುವ ಒಂದು ತಾಲ್ಲೂಕಿಗೆ ಹಾಕಬಹುದು. ಇದರ ವಿನಹ ಬೇರೆ ಏನು ಮಾಡುವುದಕ್ಕೆ ಆಗುತ್ತದೆ? ನೀವು ಈ ದಿಕ್ಕಿನಲ್ಲಿ ವಿಚಾರ ಮಾಡಬೇಕು. ಏಕೆ ಈ ಪರಿಸ್ಥಿತಿ ಬಂದಿದೆ. ನೀವು ಏನು ಹೇಳುತ್ತಿದ್ದೀರಿ ಅಂದರೆ ಬರಗಾಲ ಪರಿಹಾರದ ಕೆಲಸಕ್ಕೆ ಹಣಕ್ಕೆ ತೊಂದರೆ ಇಲ್ಲವೆಂದು ಹೇಳುತ್ತೀರಿ. ಆದರೆ ನಿಮ್ಮ ಧಾರವಾಡದ ಅಸಿಸ್ಟೆಂಟ್ ಕಮೀಷನರ್ ಹಣದ ಅಭಾವದಿಂದ ಈ ಕೆಲಸ ಮಾಡಲಿಕ್ಕೆ ಆಗಲಿಲ್ಲವೆಂದು ಬರೆಯುತ್ತಾರೆ. ತಾವು ನಮ್ಮ ಜಿಲ್ಲೆಗೆ ಬಂದಿದ್ದೀರಿ, ತಾವು ಬಂದು ಹೋದಮೇಲೆ ತಾಲ್ಲೂಕಿಗೆ ತಹಸೀಲ್ದಾರರಿಗೆ, ಅಸಿಸ್ಟೆಂಟ್ ಕಮೀಷನರ್ ಅವರಿಗೆ ಏನು ಸ್ವಾಮಿ, ಎಷ್ಟು ಕೊಟ್ಟಿದ್ದಾರೆ, ಹೇಳಿ ಎಂದು ಕೇಳಿದೆ. ನಮ್ಮ ಇಡೀ ತಾಲ್ಲೂಕಿಗೆ, ಕನಕಪುರ ತಾಲ್ಲೂಕಿಗೆ ಬರಪರಿಹಾರ ಕೆಲಸಕ್ಕೆ ಎಂದು, ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ನಮಗೆ ಕುಡಿಯುವುದಕ್ಕೆ ನೀರಿಲ್ಲ. 50 ಸಾವಿರ ರೂಪಾಯಿಗಳನ್ನು ಸಾತನೂರು ಕ್ಷೇತ್ರಕ್ಕೆ ಮತ್ತು 50ಸಾವಿರ ರೂಪಾಯಿಗಳನ್ನು ಕನಕಪುರ ಕ್ಷೇತ್ರಕ್ಕೆ ಹೀಗೆ ಒಂದು ಲಕ್ಷ ರೂಪಾಯಿಗಳನ್ನು ನಮಗೆ ನೀವು ಒದಗಿಸಿಕೊಟ್ಟಿದ್ದೀರಿ. ಈ ಪರಿಸ್ಥಿತಿ ಬರಲಿಕ್ಕೆ ಕಾರಣ ಏನು? 1972ನೇ ಇಸವಿಯಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕೆಂದು ಹೇಳಿದರು, ಅವತ್ತು ಒತ್ತಾಯ ತಂದಿದ್ದರು. ಬೀದರ್‌ನಲ್ಲಿ, ಗುಲ್ಬರ್ಗಾದಲ್ಲಿ ಮಳೆ ಹೆಚ್ಚಾಯಿತು, ಆಗ ಶ್ರೀ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದರು. ನೀವು ತಕ್ಷಣ ಕೇಂದ್ರ ಸರ್ಕಾರಕ್ಕೆ ಮಳೆಯಿಂದ ಅನಾಹುತವಾಗಿದೆ, ಹಣ ಕೊಡಲಿಕ್ಕೆ ಒಂದು ಟೀಮ್ ಕಳಿಸಿ ಎಂದು ಹೇಳಿದ್ದೆವು. ಆದರೆ ನಿಮ್ಮ ಸರ್ಕಾರ ಅದನ್ನು ಮಾಡರಲಿಲ್ಲ. ಇವತ್ತು ಇಂತಹ ಭೀಕರವಾದ ಪರಿಸ್ಥಿತಿ ಬಂದಿದೆ. ನೀವಾಗಲೀ, ನಿಮ್ಮ ಮುಖ್ಯ ಮಂತ್ರಿಗಳಾಗಲೀ ಅಥವಾ ನಿಮ್ಮ ಸಚಿವಸಂಪುಟದ ಬೇರೆ ಮಂತ್ರಿಗಳಾಗಲೀ ಯಾರದರೊಬ್ಬರು ಕೇಂದ್ರಸರ್ಕಾರಕ್ಕೆ ನೆರವಿಗೋಸ್ಕರ ಕೇಳಿದ್ದೀರಾ? ಇದರಲ್ಲಿ ರಾಜಕೀಯವನ್ನು ಬೆರಸಲಿಕ್ಕೆ ನಾನು ಪ್ರಯತ್ನ ಮಾಡುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಪದೆಪದೇ ಈ ಮನೆಯಲ್ಲಿ ಹೇಳಿದ್ದೇನೆ. ಹೋದ ಸಲ ಹೇಳಿದ್ದೇನೆ ಮತ್ತು ಮೊನ್ನೆ ಸಹ ಹೇಳಿದ್ದೇನೆ. 9ನೇ ಫೈನಾನ್ಸ್

ಕಮೀಷನ್ ಬಂದಮೇಲೆ, 1990ರ ಏಪ್ರಿಲ್ 1ರಲ್ಲಿ, ಶ್ರೀ ವಿ. ಪಿ. ಸಿಂಗ್ ಅವರ ಸರ್ಕಾರ ಇದ್ದಾಗಲಿ ನ್ಯಾಚ್ಯುರಲ್ ಕೆಲಮಿಟಿ ಫಂಡ್ ಎಂದು ಹೇಳಿ ಪ್ರತಿಯೊಂದು ರಾಜ್ಯಕ್ಕೆ ಹಣವನ್ನು ನಿಗದಿ ಮಾಡಿದ್ದಾರೆ. ಈಗ ನಮ್ಮ ಹತ್ತು ವರ್ಷಗಳ ಎಕ್ಸ್‌ಪೆಂಡಿಚರ್ ಅನ್ನು ತೆಗೆದುಕೊಂಡು ಅದರ ಆಧಾರದ ಮೇಲೆ ಕರ್ನಾಟಕ ರಾಜ್ಯಕ್ಕೆ ಬರಗಾಲ ಬರಲಿ, ಬಾರದೇ ಇರಲಿ ಆ ನಿಧಿ ಇರುತ್ತದೆ, ಬರಗಾಲ ಬಂದಾಗ ಮಾತ್ರ ಇದನ್ನು ಡ್ರಾ ಮಾಡಬೇಕು. ಬಾರದೇ ಇದ್ದಾಗ ಮುಂದಿನ ವರ್ಷಕ್ಕೆ ಇದನ್ನು ಡ್ರಾ ಮಾಡಬೇಕೆಂದು ಹೇಳಿ, ಈ ಮಿತಿಯನ್ನು ಪ್ರತಿಯೊಂದು ರಾಜ್ಯಕ್ಕೆ ಹಾಕಿದ್ದಾರೆ. ನಮಗೆ ನಿಗದಿ ಮಾಡಿದ ಹಣ 27 ಕೋಟಿ ರೂಪಾಯಿಗಳು. ಅದರಲ್ಲಿ ಕಾಲುಭಾಗ ಹಣವನ್ನು ನಾವು ಕೊಡುತ್ತೇವೆ, ಮುಕ್ಕಾಲು ಭಾಗವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಇದರ ಮೇಲೆ ಟೀಮೂ ಬರುವುದಿಲ್ಲ, ಏನೂ ಬರುವುದಿಲ್ಲ, ಏನೂ ಬರುವುದಿಲ್ಲ. ಆದರೂ ಕೂಡ ಮೊನ್ನೆ ಶ್ರೀ ಚಂದ್ರಶೇಖರ್ ಅವರು ಬಂದಾಗ, ತಾವು ಕೂಡ ಅಲ್ಲಿ ಇದ್ದೀರಿ. ನಾವು ಶ್ರೀ ಚಂದ್ರಶೇಖರ್ ಅವರಿಗೆ ಮತ್ತು ಶ್ರೀ ದೇವಿಲಾಲ್ ಅವರಿಗೆ, ಏಕೆಂದರೆ ಅವರು ಇದಕ್ಕೆ ನೇರವಾಗಿ ಸಂಬಂಧಪಡುತ್ತಾರೆ, ಅವರಿಗೆ ಮೆಮೊರೆಂಡಮ್ ಕೊಟ್ಟು ಸುಮಾರು ಕನಿಷ್ಟ 90 ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಬೇಕೆಂದು ಹೇಳಿದ್ದೇವೆ. ನ್ಯಾಚುರಲ್ ಕೆಲಮಿಟಿ ಫಂಡ್‌ನಲ್ಲಿ ಫಿಕ್ಸ್ ಮಾಡಿದ್ದು ನಮಗೆ ಸರಿಯಿಲ್ಲ, ಏಕೆಂದರೆ ನಮ್ಮ ರಾಜ್ಯಗಳಲ್ಲಿ ಒಂದು ಕಡೆ ಪ್ರವಾಸ ಇದೆ, ಮತ್ತೊಂದು ಕಡೆ ಬರಗಾಲ ಇದೆ, ಈ ಎರಡೂ ತೊಂದರೆಗಳು ಇವೆ ಎಂದು ಹೇಳಿದ್ದೇವೆ. ಆದ್ದರಿಂದ ದಯವಿಟ್ಟು ಇದನ್ನು ಮಾಡಿಕೊಡಬೇಕೆಂದು ನಾನು ಸ್ವತಃ ಮೆಮೊರ್ಯಾಂಡಂ ಅನ್ನು ಅವರಿಗೆ ಕೊಟ್ಟೆ. ಇದೂ ಅಲ್ಲದೆ ನಾನು ಮತ್ತು ಶ್ರೀ ಕೆ. ಹೆಚ್. ಪಾಟೀಲರು ಇಬ್ಬರೂ ಕೂಡ ಹೋಗಿದ್ದೆವು. ಸಾಲ ಮನ್ನಾಗೆಂದು ಅವರು ಬಂದಿದ್ದರು. ಬರಗಾಲ ಮತ್ತು ಫ್ಲಡ್ ರಿಲೀಫ್‌ಗೆ ಕೊಡಿ ಎಂದು ನಾನು ಹೋಗಿದ್ದೆ. ನಾವಿಬ್ಬರೂ ಕೂಡ ಅವರ ಮನೆಗೆ ಹೋಗಿ ಮನವಿಪತ್ರವನ್ನು ಕೊಟ್ಟಿದ್ದೆವು. ಅವರು ತಮ್ಮ ಸೆಕ್ರೆಟರಿಯವರನ್ನು ಕರೆಸಿ 'ದೇಖೋ, ಏ ಹೋಸಕಾ ಹೈ ಕ್ಯಾ?' ಎಂದು ಕೇಳಿದ್ದಕ್ಕೆ ಅವರು 'ನಹೀಂ ಸಾರ್, ಯೇ ನಹಿಂ ಹೋಸಕ್ತಾ' ಕ್ಯೋಂಕಿ ಅಬ್‌ನಯಾ ರೂಲ್ ಹೈ' ಎಂದು ಹೇಳಿದರು. ಹೊಸ ರೂಲ್ಸ್ ಪ್ರಕಾರ, ಫೈನಾನ್ಸಿಯಲ್ ಕೋಡ್ ಪ್ರಕಾರ, 9ನೇ ಫೈನಾನ್ಸ್ ಕಮಿಷನ್‌ನಲ್ಲಿ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿಗೆ ಯಾವುದೇ ರಾಜ್ಯಕ್ಕೆ ಕೊಡುವ ಹಾಗಿಲ್ಲ ಮತ್ತು ನಿಮಗೆ ಅಡ್ವಾನ್ಸ್ ಗ್ರಾಂಟ್ ಬೇಕಾದರೆ 5 ಪರ್ಸೆಂಟ್ ಮಾತ್ರ ಕೊಡಲಾಗುತ್ತದೆ ಎಂದರು. ನಾವು ಇಲ್ಲ, ಏನಾದರೂ ಮಾಡಿ ಕೊಡಿ ಎಂದು ಹೇಳಿದೆವು. ಅಲ್ಲದೆ ನಮ್ಮ ಸೆಕ್ರೆಟರಿಯವರನ್ನೂ ಸಹ ಕಳಿಸಿದ್ದೆ. ನಾನೇ ಹೋಗಿ ಕೇಳಿದ್ದೇನೆ. ಆದ್ದರಿಂದ ದಯವಿಟ್ಟು ನೋಡಿಲ್ಲವೆಂದು ಹೇಳಬೇಡಿ. ನಾನು ಮೊದಲೇ ಹೇಳಿದ ಹಾಗೆ 9ನೇ ಫೈನಾನ್ಸ್ ಕಮೀಷನ್ 1.4.90ಕ್ಕೆ ಇದನ್ನು ಫಿಕ್ಸ್ ಮಾಡಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಮ್ಮ ಸರ್ಕಾರದಿಂದ ಪ್ರಧಾನಿಗಳನ್ನು ಭೇಟಿ ಮಾಡಿ,90 ಕೋಟಿ ರೂಪಾಯಿಗಳನ್ನು ಕೇಳಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನೀವು ಇದನ್ನೇ ತಪ್ಪು ಮಾಡಿದ್ದೀರೆಂದು ನಾನು ಹೇಳುತ್ತೇನೆ. ನೀವು ಏನು 90 ಕೋಟಿ ರೂಪಾಯಿ ಕೇಳಿದ್ದೀರಿ. ಅದೇ ತಪ್ಪು. ಮತ್ತೆ ದಕ್ಷಿಣ ಭಾರತದವರು ಎಲ್ಲಾ ವಿಚಾರಗಳಲ್ಲೂ ಸಹಿತ ಮಂಗಗಳಾಗುತ್ತಿದ್ದೇವೆ. 9ನೇ ಹಣಕಾಸಿನ ಆಯೋಗ ಹೇಳಿದ ತಕ್ಷಣ, ಅಷ್ಟೇ, ಹಣ ಕೊಡಬೇಕೆಂದು ಎಲ್ಲಿದೇ? ಉದಾಹರಣೆಗೆ ಹೇಳುವುದಾದರೆ ಕರ್ನಾಟಕದಲ್ಲಿ 2ಸಾವಿರ ಜನ ಸಾಯುತ್ತಾರೆ, ಫಂಡ್ ಕೊಡದೇಹೋದರೆ ಕೇಂದ್ರಸರ್ಕಾರ ಇದೆಯೆಂದು ಹೇಗೆ ಹೇಳುವುದು. ಎಲ್ಲಿದೆ ಕೇಂದ್ರಸರ್ಕಾರ, ನನಗೆ ಅರ್ಥವಾಗುವುದಿಲ್ಲ.

ದಯಮಾಡಿ ಹೇಳಿ, ಇವತ್ತು ಉತ್ತರ ಪ್ರದೇಶ, ಮತ್ತು ಬಿಹಾರದವರಿಗೆ, ಮತ್ತೊಬ್ಬರಿಗೆ ಹಣ ಕೊಡುವುದಿಲ್ಲವೇ? ನಮಗೆ ಮಾತ್ರ ಅನ್ಯಾಯ ಮಾಡುತ್ತಿದ್ದಾರೆ. 9ನೇ ಹಣಕಾಸಿನ ಆಯೋಗ ಹೇಳಿರುವುದೇ ಅಂತಿಮ ಎಂದು ಹೇಗೆಹೇಳುವುದು, ತಾವು ಒಂದು ಮಾತು ಹೇಳಿದಿರಿ. ಶ್ರೀ ವಿ.ಪಿ. ಸಿಂಗ್‌ರವರ ಸರ್ಕಾರದಲ್ಲಿ ನ್ಯಾಚುರಲ್ ಕಲಾಮಿಟಿ ಫಂಡ್ ಎಂದು ಮಾಡಿ ಅದರಲ್ಲಿ 20 ಕೋಟಿ ರೂಪಾಯಿ ಕೊಟ್ಟಿದ್ದಾರೆಂದು ಹೇಳಿದಿರಿ. ನಾನು ಹೇಳುವುದು ಅದಲ್ಲ, ಒಂದು ಸ್ಪೆಷಲ್ ಕೇಸನ್ನು ಮಾಡುವುದಕ್ಕೆ ಈ ಸರ್ಕಾರ ಫೇಲ್ಯೂರ್ ಆಗಿದೆ. ಇವತ್ತು ಮುಖ್ಯಮಂತ್ರಿಗಳು ಬೇಕಾದಷ್ಟು ವಿಷಯದಲ್ಲಿ ಪ್ರಧಾನಿಗಳನ್ನು ಭೇಟಿ ಮಾಡಿದ್ದಾರೆ, ಉಪ ಪ್ರಧಾನಿಗಳನ್ನು ಕರೆಸಿಕೊಂಡು ಮೆರವಣಿಗೆ ಮಾಡಿಸಿದ್ದಾರೆ. ನಾನು ಕೇಳುವುದು, ಸ್ಪೆಷಲ್ ಕೇಸನ್ನು ಏಕೆ ಮಾಡುವುದಕ್ಕಾಗಿಲ್ಲ ಎಂದು 130 ತಾಲ್ಲೂಕುಗಳಲ್ಲಿ ಒಂದು ತಾಲ್ಲೂಕಿಗೆ ಕೊನೇಪಕ್ಷ ಒಂದು ಕೋಟಿ ಎಂದರೂ 130 ಕೋಟಿ ರೂಪಾಯಿ ಬೇಕಾಗುತ್ತದೆ. 130ಕೋಟಿ ರೂಪಾಯಿ ಕೇಳುವುದಕ್ಕೆ, ಸ್ಪೆಷಲ್ ಕೇಸ್ ಮಾಡುವುದರಲ್ಲಿ ಈ ಸರ್ಕಾರ ಟೋಟಲ್ ಫೇಲ್ಯೂರ್ ಆಗಿದೆ. ನಾವು ಕಳೆದ ಅಧಿವೇಶನದಲ್ಲೂ ಚರ್ಚೆ ಮಾಡಿದ್ದೇವೆ. ಅದರಿಂದ ಏನು ಪರಿಣಾಮವಾಗಿದೆ? "ಗೋರ್ಕಲ್ಲ ಮೇಲೆ ಮಳೆ ಸುರಿದಂತೆ" ಮೂರು ಕಾಸಿನ ಉಪಯೋಗವಾಗಿಲ್ಲ, ನಾವು ಕೊಡತಕ್ಕ ಸಲಹೆಗಳು ನಿಮಗೆ ಬೇಕಾಗಿಲ್ಲ. ಸುಮ್ಮನೆ ನಿಮ್ಮ ಎಲ್ಲಾ ಸಲಹೆಗಳನ್ನೂ ತೆಗೆದುಕೊಳ್ಳುತ್ತೇವೆಂದು ಏಳುತ್ತೀರಿ. ಏನು ಮಾಡಿದ್ದೀರಿ ಎಂದು ನಮಗೆ ಅರ್ಥವಾಗುತ್ತಿಲ್ಲ, ಮತ್ತೆ ನಿಜಾಂಶವನ್ನು, ಸತ್ಯಾಂಶವನ್ನು ಜನಗಳ ಮುಂದೆ ಇಡುವುದಕ್ಕೆ ತಯಾರಿಲ್ಲ, ನಿಜವಾದ ಸಮಸ್ಯೆ ಏನು? ಇವತ್ತು ನಿಮಗೆ ಕೆಲಸ ಮಾಡುವುದಕ್ಕೆ ಗೊತ್ತಿಲ್ಲವೆಂದಲ್ಲ, ಎಲ್ಲವೂ ಗೊತ್ತಿದೆ. ಎಷ್ಟು ಬೋರ್‌ವೆಲ್‌ಗಳನ್ನು ಹಾಕಿಸಬೇಕು, ಕರಂಟ್ ಎಷ್ಟು ಬೇಕು, ಮೇವು ಎಷ್ಟು ಕೊಡಬೇಕು ಎಂದು ಗೊತ್ತಿದೆ. ಪ್ರೊ ನಂಜುಂಡಸ್ವಾಮಿಯವರು ಹೇಳಿದಹಾಗೆ, ಶಾಶ್ವತ ಬರಪರಿಹಾರದ ಕೆಲಸ ಮಾಡುವುದಕ್ಕೆ ಏನು ಬೇಕು ಎಂಬುದು ಗೊತ್ತಿದೆ. ಈ ಹೇಳಿಕೆ ಮೂಲಕ ನೀವು ಸತ್ಯಾಂಶವನ್ನು ಮರೆಮಾಚುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಸತ್ಯಾಂಶ ಏನೆಂದರೆ ಇವತ್ತು ನಿಮ್ಮ ಸರ್ಕಾರದಲ್ಲಿ ಹಣ ಇಲ್ಲ, ಇದನ್ನು ನೀವು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ, ನಾವು ಆ ಕಡೆ ಕುಳಿತಿದ್ದಾಗ, ಬಹಳ ದೊಡ್ಡದಾಗಿ, ಭಾಷಣ ಮಾಡಿದ್ದೀರಿ. ಎಲ್ಲಾ ದಿವಾಳಿಯಾಗಿದೆ, ಸಂಬಳ ಸಾರಿಗೆ ಕೊಡುವುದಕ್ಕೆ ಹಣ ಇಲ್ಲ, ಎಲೆಲ್ಲೋ ಹೊರಟು ಹೋಗಿದೆ ಎಂದು ದೊಡ್ಡ ದೊಡ್ಡ ಭಾಷಣವನನ್ನು ಮಾಡಿದಿರಿ. ಇಂದು ಏನಾಗಿದೆ, 500 ಕೋಟಿ ರೂಪಾಯಿಗಳು ಎಂದು ಹೇಳುತ್ತೀರಿ, ಮಾನ್ಯ ಶಿವಮೂರ್ತಿಯವರು ಹೇಳಬೇಕು. 500 ಕೋಟಿ ರುಪಾಯಿಗಳು ಎಕ್ಸೈಸ್‌ನಲ್ಲಿ ಬರುತ್ತದೆ, ಅದರಲ್ಲಿ 150 ಕೋಟಿ ರೂಪಾಯಿಗಳನ್ನು ಕೊಡಿ,' ಈ ಬಡವರಿಗೋಸ್ಕರ ಇದರ ಬದಲಾಗಿ ನಿಮ್ಮ ಮಂತ್ರಿಗಳು ಹೇಳುತ್ತಾರೆ, ನಿಮ್ಮ ಕಣ್ಣಲ್ಲಿ ನೀರು ಬಂದರೆ ಒರೆಸಿಕೊಂಡು ಹೋಗಿ ಎಂದು ಹೇಳುತ್ತಾರೆ. ಇದು ಎಂತಹ ಉದ್ಧಟತನದ ಮಾತು ಎಂದು ದಯವಿಟ್ಟು ಯೋಚನೆ ಮಾಡಿ. ನಾವು ಅಧಿಕಾರಿಗಳನ್ನು ಬೈದರೆ ಏನು ಉಪಯೋಗ. ಅವರು ಹಣ ಕೊಟ್ಟರೆ ಮಾಡುತ್ತೇವೆಂದು ಹೇಳುತ್ತಾರೆ. ಎಲ್ಲಾ ಅಧಿಕಾರಿಗಳೂ ಇದೇ ಮಾತನ್ನು ಹೇಳುತ್ತಾರೆ. ಎಲ್ಲಿವೆ ದುಡ್ಡು ಎಂದು ಇದನ್ನೇ ಕೇಳುತ್ತಿದ್ದಾರೆ. ಇವತ್ತು ಕೇವಲ ಬೆಂಗಳೂರು ನಗರದಲ್ಲಿ ಜನತಾ ದಳ ಸಿ.ಪಿ.ಐ., ಸಿ.ಪಿ.ಎಂ, ಎಲ್ಲಾ ಪಾರ್ಟಿಯವರೂ ಧರಣಿ ಮಾಡುತ್ತಿದ್ದಾರೆ. ಮಾನ್ಯ ಉಪಾಧ್ಯಕ್ಷರಿಗೆ ಆಶ್ಚರ್ಯವಾಗಬಹುದು. ನಮ್ಮ ಸ್ವಂತ ಮನೆಯಲ್ಲಿ ಪ್ರತಿದಿನ ಸ್ನಾನ ಮಾಡುವುದಕ್ಕಾಗುತ್ತಿಲ್ಲ. ಮಲ್ಲೇಶ್ವರಂ, ರಾಜಾಜಿನಗರ, ಜಯಮಹಲ್ ಬಡಾವಣೆಗಳಲ್ಲಿರುವ ಜನಗಳಿಗೆ ಜೀವನ ಮಾಡುವುದಕ್ಕೆ ಕಷ್ಟವಾಗಿದೆ. ಪಟ್ಟಣ ಪ್ರದೇಶಗಳಲ್ಲಿ, ಅದು ದಾವಣಗೆರೆ ಇರಬಹುದು. ಚಿತ್ರದುರ್ಗ ಇರಬಹುದು, ಮಂಗಳೂರು ಇರಬಹುದು, ಹುಬ್ಬಳ್ಳಿ ಇರಬಹುದು. ಕೆ.ಯು.ಡಬ್ಲ್ಯು. ಎಸ್.ಎಸ್.ಬಿ. ಯವರನ್ನು ನಾನು ಕೇಳಿದೆ. ನಿಮಗೆ ಬೋರ್‌ವೆಲ್‌ಗಳನ್ನು

ಹಾಕುವುದಕ್ಕೆ ಏನು ತೊಂದರೆ ಇದೆಯೆಂದು ಕೇಳಿದೆ. ಅದಕ್ಕೆ ಅವರು, ಸ್ವಾಮಿ ದುಡ್ಡು ಕೊಡಿಸಿ ಎಂದು ಕೇಳುತ್ತಾರೆ. ದುಡ್ಡು ಇಲ್ಲದೆ ಇನ್ನೇನು ಮಾಡುತ್ತೀರಿ ಇವತ್ತು. ಎಲ್ಲಾ ಪಟ್ಟಣ ಪ್ರದೇಶಗಳಲ್ಲೂ ಕುಡಿಯುವ ನೀರಿಗೆ ತೀವ್ರವಾದ ಅಭಾವ ಬಂದಿದೆ. ನಾವು ಈಗ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಇದ್ದೇವೆ. ಏಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ ಏನಾಗಬಹುದು ಎಂಬುದನ್ನು ಯೋಚನೆಮಾಡಿ. ನಿನ್ನೆ ನಾವೆಲ್ಲರೂ ಇಲ್ಲಿ ಮಾತನಾಡಿದಷ್ಟೇ ಅಲ್ಲ, ಸಾಕಷ್ಟು ಕಟುವಾಗಿ ಟೀಕೆ ಮಾಡಿದ್ದೇವೆ. ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಸದನದಲ್ಲಿ ಕುಳಿತು ಕೇಳುವುದಕ್ಕೂ ತಯಾರಿಲ್ಲ, ಅವರು ಎಲ್ಲಿ ಹೋಗಿದ್ದಾರೆ ಎಂಬುದೇ ನಮಗೆ ಅರ್ಥವಾಗುವುದಿಲ್ಲ, ಇವರ ಸರ್ಕಾರದ ನೀತಿ ಏನೆಂದರೆ ಬೆಂಗಳೂರಿನಲ್ಲಿ ಇವತ್ತು ಕುಡಿಯುವುದಕ್ಕೆ ನೀರು ಇಲ್ಲ. ಮುಂಚೆ ಒಂದು ದಿನ ನೀರು ಕೊಡುವುದಿಲ್ಲವೆಂದು ಹೇಳಿದರು, ನಂತರ ವಾರದಲ್ಲಿ ಎರಡು ದಿನ ಕೊಡುವುದಿಲ್ಲವೆಂದು ಹೇಳಿದರು. ನೀವು ಈ ರೀತಿ ಹೇಳದೇ ವಾರದಲ್ಲಿ 7 ದಿನವೂ ನೀರು ಕೊಡುವುದಿಲ್ಲವೆಂದು ಹೇಳಿದರೆ ನಿಮಗೆ ತೊಂದರೆಯಾಗುವುದಿಲ್ಲ. ಇದನ್ನೂ ಹೇಳತಕ್ಕ ಕಾಲ ಬರುವುದರಲ್ಲಿ.....

ಶ್ರೀ ವಾಟಾಳ್ ನಾಗರಾಜ್ : ಇವತ್ತು ಬೆಂಗಳೂರಿನಲ್ಲಿ ನೀರಿಗಿಂತ ಬೀರು ಯಾವಾಗಲೂ ಸಿಗುತ್ತಿದೆ. ನೀರು ಮಾತ್ರ ಸಿಕ್ಕುತ್ತಿಲ್ಲ, ಬೀರು, ವಿಸ್ಕಿ ಯಾವ ಫಳಿಗೆಯಲ್ಲಿ ಎಷ್ಟು ಬೇಕಾದರೂ ಸಿಗುತ್ತಿದೆ. ಧಾರಳವಾಗಿ ಸಿಗುತ್ತಿದೆ. ರಸ್ತೆ ರಸ್ತೆ, ಬೀದಿ, ಬೀದಿ, ಗಲ್ಲಿ, ಗಲ್ಲಿಗಳಲ್ಲಿ ಇದು ಸಿಗುತ್ತಿದೆ. ಇದಕ್ಕೆ ಏನೂ ಕೊರತೆ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿ ಆದನಂತರ ಬೆಂಗಳೂರನ್ನು ಲಂಡನ್ ಮಾಡಿದ್ದಾರೆ. ಲಂಡನ್‌ನಲ್ಲಿ ನೀರು ಕುಡಿಯುವುದಿಲ್ಲ ಬೀರ್ ಕುಡಿಯುತ್ತಾರೆ. ಇಲ್ಲಿ ಬೀರೇ ಕುಡಿಯಿರಿ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನೀರು ಸಿಗುವುದಿಲ್ಲ, ಬೀರ್ ಸಿಗುತ್ತದೆ, ಎಷ್ಟು ವಿಪರ್ಯಾಸ ನೋಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಉಪಾಧ್ಯಕ್ಷೆಯವರೆ ನಿನ್ನೆ ದಿನ ನಮ್ಮ ಸಹೋದ್ಯೋಗಿಗಳಾದ ಮಾನ್ಯ ದೇಶಪಾಂಡೆಯವರು ಹೇಳಿದರು, ಬಿ.ಡಬ್ಲ್ಯು. ಎಸ್. ಎಸ್. ಬಿ. ಅಧಿಕಾರಿಗಳಿಗೆ ಫೋನ್ ಮಾಡಿದರೆ ಅವರು ಸಿಗುವುದಿಲ್ಲ, ಒಬ್ಬ ಶಾಸಕರು ಫೋಸ್ ಮಾಡಿದ್ದಾರೆ ಎಂದು ಅವರಿಗೆ ಹೇಳಿದರೆ, ವಾಪಸ್ ಫೋನ್ ಮಾಡತಕ್ಕದ್ದು ಅವರು ಯಾರಿಗೂ ಸಹಿತ ಇಲ್ಲ, ನಾನು ಜವಾಬ್ದಾರಿಯಿಂದ ಈ ಮಾತನಾಡುತ್ತಿದ್ದೇನೆ. ಅವರು ಫೋನ್‌ನಲ್ಲಿ ಯಾರಿಗೂ ಸಿಗುವುದಿಲ್ಲ, ನಿಮಗೇನು ದುಡ್ಡಿದೆ, ನೀರು ತರಿಸಿಕೊಂಡು ಉಪಯೋಗ ಮಾಡಿಕೊಳ್ಳಿರಿ ಎಂದು ಹೇಳುತ್ತಾರೆ. ದುಡ್ಡು ಕೊಟ್ಟು ನೀರು ತೆಗೆದುಕೊಂಡು ಸ್ನಾನ ಮಾಡಿದರೆ ಮೈಯೆಲ್ಲಾ ಕೆರೆತ ಬರುತ್ತದೆ. ಅದನ್ನು ಟೆಸ್ಟ್ ಮಾಡಿದ್ದೀರಾ? ಯಾರು ಯಾರೋ ಬಂದು ನೀರು ಸಪ್ಲೈ ಮಾಡುತ್ತಿದ್ದಾರೆ. ಅದು ಒಳ್ಳೆಯ ನೀರೋ,ಯಾವ ನೀರೋ, ಯಾವ ನೀರು, ಕೆಂಗೇರಿ ಹತ್ತಿರ ಹೋಗುವ ಸ್ಯೊಯೆಜ್ ನೀರು ಪಂಪ್ ಮಾಡಿಕೊಂಡು ಬಂದು ಮಾರುತ್ತಿದ್ದಾರೋ ಗೊತ್ತಿಲ್ಲ, ನಿಮ್ಮ ಸರಕಾರಕ್ಕೆ ನೀರು ಕೊಡುವುದಕ್ಕೆ ಆಗುವುದಿಲ್ಲ, ಪ್ರೈವೇಟ್‌ನವರು ಏನು ನೀರು ಸರಬರಾಜು ಮಾಡುತ್ತಿದ್ದಾರೆ ಅದು ಕುಡಿಯುವುದಕ್ಕೆ ಅಲ್ಲದೇ ಹೋದರು ಸ್ನಾನ ಮಾಡುವುದಕ್ಕಾದರೂ ಯೋಗ್ಯವಾದ ನೀರು ಎಂದು ಟೆಸ್ಟ್ ಮಾಡಿ ಹೇಳಿರಿ. ನಿಮ್ಮ ಮಂತ್ರಿಗಳು ಏರಿಯಾವೈಸ್ ಡಿಸ್ಟ್ರಿಬ್ಯೂಷನ್ ಮಾಡುತ್ತಿದ್ದೇವೆಂದು ಹೇಳಿದರು. ಒಂದು ಏರಿಯಾಕ್ಕೆ ನೀರು ಬರುತ್ತದೆ, ಇನ್ನೊಂದು ಏರಿಯಾಕ್ಕೆ ಬರುವುದಿಲ್ಲ, ಒಂದು ಏರಿಯಾದಲ್ಲಿ ಒಂದು ಲೈನ್‌ಗೆ ಬರುತ್ತದೆ, ಮತ್ತೊಂದು ಲೈನ್‌ಗೆ ಬರುವುದಿಲ್ಲ, ಇದಕ್ಕೆ ಏನು ಕಾರಣ? ಇದರ ಬಗ್ಗೆ ಕೇಳಿದರೆ

ಶಾಸಕರ ಮುಖಂಡತ್ವದಲ್ಲಿ ಸಮಿತಿ ಮಾಡಿದ್ದೇವೆ ಎಂದು ಹೇಳುತ್ತೀರಿ. ಶಾಸಕರ ಮುಖಂಡತ್ವದಲ್ಲಿ ಸಮಿತಿ ಮಾಡಿದರೆ ಎಲ್ಲಾ ಹಳ್ಳಿಗಳಿಗೂ ಬೋರ್‌ವೆಲ್ ಹಾಕುವುದಕ್ಕಾಗುತ್ತದೆಯೇ? ದುಡ್ಡೇ ಇಲ್ಲ. ದುಡ್ಡು ಕೊಡದೇ ನೀವು ಇವತ್ತು ಉಡಾಫೆ ಮಾತುಗಳನ್ನು ಎಲ್ಲರೂ ಸಹಿತ ಹೇಳುತ್ತಿದ್ದೀರಿ. ಇವತ್ತು ಹಳ್ಳಿ ಪ್ರದೇಶಗಳಲ್ಲಿ ಏನು ಪರಿಸ್ಥಿತಿ ಇದೆ, ಅದಕ್ಕಿಂತ ಕಠಿಣ ಪರಿಸ್ಥಿತಿ ಬೆಂಗಳೂರುನಗರ ಹಾಗೂ ಇತರ ಪಟ್ಟಣ ಪ್ರದೇಶಗಳಲ್ಲಿ ಇದೆ ಎಂಬುದನ್ನು ಸರಕಾರ ಗಮನಿಸಬೇಕು. ಬಹಳ ಕಠಿಣ ಪರಿಸ್ಥಿತಿ ಇದೆ. ನಿಮ್ಮ ಸರಕಾರಕ್ಕೆ ಇವತ್ತು ಬಹಳ ಜನಗಳು ಶಾಪವನ್ನು ಹಾಕುತ್ತಿದ್ದಾರೆ. ಆ ಶಾಪ ತಟ್ಟುವುದಕ್ಕೆ ಮುಂಚೆ ದಯವಿಟ್ಟು ಕುಡಿಯುವ ನೀರನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಸ್ವಾಮಿ, ನೀವು ಮಾತನಾಡುವುದಕ್ಕೆ ಆಗುವುದಿಲ್ಲ. ಮಾತನಾಡುವುದು ಕಷ್ಟ ನನಗೆ ಗೊತ್ತಿದೆ. ಅದು ಬೇಡ ಸುಮ್ಮನಿರಿ.

ಶ್ರೀ ಟಿ. ರುದ್ರಗೌಡ ಪಾಟೀಲ್ (ರಾಮದುರ್ಗ): ಬಹಳ ಎಗ್ಟಾಗರೇಷನ್ ಮಾಡುತ್ತಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾಳೆ ದಿವಸ ಪತ್ರಿಕೆಗಳಲ್ಲಿ ರಾಮದುರ್ಗ ಕ್ಷೇತ್ರದಲ್ಲಿ ನೀರು ಸಮೃದ್ಧವಾಗಿದೆ, ಬರಗಾಲ ಇಲ್ಲ ಎಂದು ಬರಲಿ. ಅದರೆ ನಮ್ಮ ಕ್ಷೇತ್ರದಲ್ಲಿ ಬಹಳ ತೊಂದರೆ ಇದೆ. ಜನ ಓಟು ಕೊಟ್ಟು ಕಳುಹಿಸಿದ್ದಾರೆ. ಅದಕ್ಕೋಸ್ಕರವಾಗಿ ನಾನು ಕೇಳುತ್ತಿದ್ದೇನೆ. ಅಪ್ಪಣೆನಾ?

ಉಪಾಧ್ಯಕ್ಷರು: ಅವರು ತೊಂದರೆ ಇಲ್ಲ ಎಂದು ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮತ್ತೆ ಏತಕ್ಕೆ ಇಲ್ಲಿ ಇಂಟರ್‌ಫಿಯರ್ ಆಗಬೇಕು.

ಉಪಾಧ್ಯಕ್ಷರು: ಅವರು ಇಲ್ಲ ಎಂದು ಹೇಳಲಿಲ್ಲ, ಎಗ್ಟಾಗರೇಷನ್ ಮಾಡಬೇಡಿ ಎಂದು ಹೇಳಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಂತ್ರಿಗಳಾದ ನರಸಿಂಹಮೂರ್ತಿಯವರು ಇಲ್ಲಿ ಮಾತನಾಡುತ್ತಾ ಈ ಸದನದಿಂದಲೇ ಹೊರಟು ಹೋಗೋಣ ಎಂದು ಹೇಳಿದರು. ಈ ಸದನದಿಂದ ಹೋಗುವುದಕ್ಕೆ ನಾವು ಬಂದಿಲ್ಲ. ಈ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ನಾವು ಬಂದಿದ್ದೇವೆ. ಸದನ ಮುಗಿದ ಮೇಲೆ ಹೋಗೋಣ ಬನ್ನಿ ಎನ್ನುತ್ತಾರೆ. ಎಲ್ಲಿಗೆ ಹೋಗುವುದು ಎಲ್ಲರಿಗೂ ಗೊತ್ತಿದೆ. ನಮ್ಮ ಪತ್ರಿಕಾ ವರದಿಗಾರರು ಹಾಡುಹಗಲಲ್ಲಿ ಈ ಪುಣ್ಯಾತ್ಮನನ್ನು ಹೋಗಿ ತೋರಿಸಿದರು. ಒಂದು ಡೀಸೆಲ್ ಪಂಪ್‌ನಲ್ಲಿ ಲಾರಿಗೆ ಡೀಸೆಲ್ ಹಾಕಿಸಿಕೊಂಡು ಹೋಗಿ ಪುನಃ ಬಂದು ಕ್ಯೂನಲ್ಲಿ ನಿಲ್ಲುತ್ತಾರೆ.

ಉಪಾಧ್ಯಕ್ಷರು: ಟೈಮ್ ಆಯಿತು, ಬೇಗ ಮುಗಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನೀವು ಬೇಡ ಎಂದರೆ ಕುಳಿತುಕೊಳ್ಳುತ್ತೇನೆ. ನಿಮಗೆ ಗೊತ್ತಿದೆ, ಡೀಸೆಲ್ ಮುಖ್ಯ. ನೀವೂ ರೈತರ ಪಕ್ಷದಲ್ಲಿ ಇರುವವರು.

ಉಪಾಧ್ಯಕ್ಷರು: ನೀರಿನ ಬಗ್ಗೆ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನೀರಿಗೂ ಡೀಸೆಲ್‌ಗೂ ಬಹಳ ಹತ್ತಿರದ ಸಂಬಂಧ ಇದೆ.

ಉಪಾಧ್ಯಕ್ಷರು: ನೀರಾಯಿತು, ಬೀರ್ ಆಯಿತು, ಈಗ ಡೀಸೆಲ್‌ಗೆ ಬಂದಿದ್ದಿರಿ [illegible] ಮುಕ್ತಾಯ ಮಾಡಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಈಗ ಪರಿಸ್ಥಿತಿ ಎನಾಗಿದೆ ಎಂದರೆ, ನೀವಲ್ಲಾ ಬೇಡ ಎಂದು ಹೇಳಿದರೆ ನಾನು ಕುಳಿತು ಕೊಂಡುಬಿಡುತ್ತೇನೆ.

ಉಪಾಧ್ಯಕ್ಷರು: ಅವರು ತಮ್ಮ ಟೈಮ್ ಎಲ್ಲಾ ನಿಮಗೆ ಕೊಡುತ್ತೇವೆಂದು ಹೇಳುತ್ತಿದ್ದಾರೆ, ತಾವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಈಗ ಹಳ್ಳಿಗಳಲ್ಲಿ ಎರಡು ಮೈಲಿ, ಮೂರು ಮೈಲಿ ದೂರದಿಂದ ನೀರನ್ನು ತಂದು ಕುಡಿಯತಕ್ಕ ಪರಿಸ್ಥಿತಿ ಬಂದಿದೆ.ಪಕ್ಷಿಗಳಿಗೂ ಸಹ ಕುಡಿಯಲು ನೀರು ಇಲ್ಲ. ಎಷ್ಟು ಬೋರ್‌ವೆಲ್‌ಗಳನ್ನು ನೀವು ತಾಲ್ಲೂಕುವಾರು ತೋಡಿಸಿದ್ದೀರಿ ಎನ್ನುವ ಅಂಕಿಅಂಶಗಳನ್ನು ದಯವಿಟ್ಟು ನನಗೆ ಕೊಡಿ. ನೀವು ಕೇಂದ್ರ ಸರ್ಕಾರಕ್ಕೆ ಒಂದು ಪತ್ರ ಬರೆದು ನಮಗೆ ಒಂದು ಟೀಮ್ ಕಳುಹಿಸಿಕೊಡಿ ಅವರು ಎನಾದರೂ ಒಂದಷ್ಟು ಹಣ ಕೊಡಲಿ ಎಂದು ಹೇಳಿದರೆ ನೀವೆ ಒಂದು ಹೇಳಿಕೆ ಕೊಟ್ಟು ಬಿಟ್ಟಿದ್ದೀರಿ. ಕೇಂದ್ರ ಸರ್ಕಾರದಿಂದ ಹಣ ಬರುವುದಿಲ್ಲವೆಂದು ನೀವೇ ಹೇಳಿಕೆ ಕೊಟ್ಟು ಬಿಟ್ಟರೆ ಇನ್ನು ಕೇಂದ್ರ ಸರ್ಕಾರದಿಂದ ಹಣ ಎಲ್ಲಿ ಬರುತ್ತದೆ? ಇನ್ನು ಯಾರು ನಿಮಗೆ ನೀರು ಕೊಡುತ್ತಾರೆ? ಈಗ ದನಕರುಗಳು ಪಾಪ ಅವು ಮೂಕ ಪ್ರಾಣಿಗಳು, ಅವು ಮಾತನಾಡುವುದಕ್ಕಾಗುವುದಿಲ್ಲ.ಅವುಗಳಿಗೆ ಎಲ್ಲಿಂದ ಮೇವು ತರುವುದು? ಮೇವು ತರುವುದಕ್ಕೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಈಗ ಆಂಧ್ರಪ್ರದೇಶದಲ್ಲಿ ಮೇವು ಇದೆ. ತಮಿಳುನಾಡಿನಲ್ಲಿ ಮೇವು ಇರಬಹುದು, ಕೇರಳದಲ್ಲಿ ಮೇವು ಇರಬಹುದು, ಮಹಾರಾಷ್ಟ್ರದಲ್ಲಿ ಮೇವು ಇರಬಹುದು. ಆ ಮೇವನ್ನು ತೆಗೆದುಕೊಂಡು ಬರುವುದಕ್ಕೆ ನೀವು ಯಾವುದಾದರೂ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದೀರಾ? ದಯವಿಟ್ಟು ನನಗೆ ಹೇಳಿ. 1972ನೇ ಇಸವಿಯಲ್ಲಿ ಉತ್ತರ ಪ್ರದೇಶದ ಮುಖ್ಯ ಮಂತ್ರಿಗಳಿಗೆ ಪತ್ರವನ್ನು ಬರೆದಿದ್ದಾರೆ. ಅಂದಿನ ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ ಅರಸುರವರು ನಮಗೆ ಬಾರ್ಲಿಹೊಟ್ಟನ್ನು ಕಳುಹಿಸಿಕೊಡಿ ಎಂದು ಪತ್ರಬರೆದಿದ್ದಾರೆ. ಆದರೆ ನಿಮಗೆ ಈಗ ಇರುವ ತೊಂದರೆ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಅದಕ್ಕೆ ಶ್ರೀಮಾನ್ ಬಸವಲಿಂಗಪ್ಪನವರ ಒಳ್ಳೆಯ ಸಲಹೆ ಇದೆ. ಯಾರೋ ಒಬ್ಬರು ಬರಗಾಲ ಬಂದಿದೆ, ದನಕರುಗಳಿಗೆ ಮೇವು ಇಲ್ಲ ಎಂದು ಹೇಳಿದರೆ, ಅದಕ್ಕೆ ಅವರು ಬೆಂಗಳೂರು ನಗರದಲ್ಲಿ ಕಸಾಯಿ ಖಾನೆಯನ್ನು ಕಟ್ಟಿಸುತ್ತಿದ್ದೇನೆ ಎಂದರಂತೆ ನೋಡಿ ಸರ್ಕಾರದ ಉತ್ತರ ಎಷ್ಟು ಚೆನ್ನಾಗಿದೆ? ಕಸಾಯಿ ಖಾನೆಯನ್ನು ಇವರು ಕಟ್ಟಿಸುತ್ತಾರಂತೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸಿಂಧ್ಯರವರು ಎಕ್ಸಾಜರೇಷನ್ ಮಾಡಿದರೆ ಅದರ ಮಹತ್ವ ಕಡಿಮೆಯಾಗುತ್ತದೆ. ಆದ್ದರಿಂದ ಎಕ್ಸಾಜರೇಷನ್ ಮಾಡಬೇಡಿ. ಅದಕ್ಕೆ ನಾನು ತಮಗೆ ಒಂದು ಉದಾಹರಣೆ ಕೊಡುತ್ತೇನೆ. ಅನೇಕ ಮಾನ್ಯ ಶಾಸಕರು ಧಾರವಾಡ ಜಿಲ್ಲೆಯವರು ಇರಬಹುದು. ಅವರನ್ನು ತಾವು ಕೇಳಿ. ನಾವು ಕರ್ನಾಟಕ ಫಾರೆಸ್ಟ್ ಇಂಡಸಸ್ಟ್ರೀಸ್ ಕಾರ್ಪೊರೇಶನ್‌ನಿಂದ ಫಾಡರ್ ಕಲೆಕ್ಟ್ ಮಾಡಿ ಅವರಿಗೆ ಸಪ್ಲೈಮಾಡಿ ಎಂದು ಆದೇಶ ಕೊಟ್ಟು ಡಿ.ಸಿ.ಯವರಿಗೆ ಹಣ ಕೊಟ್ಟಿದ್ದೇವೆ. ಅವರು ಆ ಫಾಡರ್‌ನ್ನು ತರಿಸಿ ಕೊಟ್ಟರೆ ಅಲ್ಲಿನ ಜನ ಹೇಳುತ್ತಾರೆ, ಸ್ವಾಮಿ ನಮ್ಮ ದನಕರುಗಳು ಈ ಮೇವು ತಿನ್ನುವುದಿಲ್ಲ. ನಮಗೆ ನೀವು ಟ್ರಾನ್ಸ್‌ಪೋರ್ಟೇಶನ್ ಚಾರ್ಜ್ ಕೊಡಿ, ನಾವು ಬಳ್ಳಾರಿ ಅಥವಾ ಚಿತ್ರದುರ್ಗ ಇಂತಹ ಹೊರಗಡೆ ಜಿಲ್ಲೆಗಳಿಂದ ಫಾಡರನ್ನು ತರುವುದಕ್ಕೆ ಅವಕಾಶ ಮಾಡಿ ಈ ಫಾಡರ್ ಸರಿ ಇಲ್ಲ ಎಂದು ಹೇಳಿದ್ದಾರೆ. ಎಲ್ಲಿ ಪರಿಸ್ಥಿತಿ ಗಂಬೀರವಾಗಿದೆ ಅಲ್ಲಿ ಟ್ರಾನ್ಸ್‌ಪೋರ್ಟೇಶನ್

ಮಾಡಿದ್ದಕ್ಕೆ ನೇರವಾಗಿ ಹಣ ತೆಗೆದುಕೊಂಡಿದ್ದಾರೆ. ಇನ್ನು ಕೆಲವು ಕಡೆ ಫಾರೆಸ್ಟ್ ಇಂಡಸ್ಟ್ರಿಸ್ ಕಾರ್ಪೊರೇಷನ್‌ನಿಂದ ನೇರವಾಗಿ ಫಾಡರನ್ನು ಸಪ್ಲೈ ಮಾಡಿದರೂ ಕೂಡ ಅವರು ಪಾಡರ್ ತೆಗೆದುಕೊಂಡಿಲ್ಲಿ. ಇದರ ಬಗ್ಗೆ ತಮ್ಮ ಧಾರವಾಡ ಮಿತ್ರರನ್ನು ತಾವು ಕೇಳಬಹುದು. ಅದು ಬಿಟ್ಟು ತಾವು ಸುಮ್ಮನೆ ಬಸವಲಿಂಗಪ್ಪನವರು ಕಸಾಯಿ ಖಾನೆ ಕಟ್ಟಿಸುತ್ತಾರೆ ಅದಕ್ಕೆ ತಮ್ಮ ದರಕರುಗಳನ್ನು ತೆಗೆದುಕೊಂಡು ಹೋಗಿ ಎಂದು ಹೇಳಿದ್ದಾರೆಂದು ಹೇಳಬೇಡಿ. ಎಲ್ಲಿ ಮೇವಿನ ಕೊರತೆ ಇದ್ದರೆ ಹೇಳಿ ಅಲ್ಲಿಗೆ ನಾವು ಹಣ ಬಿಡುಗಡೆ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಪಶುಸಂಗೋಪನಾ ಸಚಿವರಾದ ಸನ್ಮಾನ್ಯ ಶ್ರೀ ಬಿ. ಬಸವಲಿಂಗಪ್ಪನವರು ಪತ್ರಿಕಾ ಹೇಳಿಕೆ ಇದೆ. ಬೆಂಗಳೂರು ನಗರದಲ್ಲಿ ಕಸಾಯಿ ಖಾನೆಯನ್ನು ಇನ್ನು ಎರಡು ತಿಂಗಳಲ್ಲಿ ರೆಡಿ ಮಾಡಿಸುತ್ತೇನೆಂದು ಹೇಳಿದ್ದಾರೆ. ಇದರ ಅರ್ಥ ಏನು? ಏಕೆ ಈ ರೀತಿ ಹೇಳಬೇಕು? ನನಗೆ ಅರ್ಥವಾಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ: ದನಗಳಿಗೆ ಕಸಾಯಿ ಖಾನೆ ಆಯಿತು. ಮನುಷ್ಯರಿಗೆ ಏನು ಮಾಡುತ್ತಾರೆ, ಅದನ್ನು ಕೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಅದನ್ನೇ ಕೇಳೋಣ ಎಂದು ಹೊರಟಿದ್ದೆ, ನೀವು ನಮಗೆ ಯಾವಾಗ ಕಸಾಯಿ ಖಾನೆ ತೆರೆಯುತ್ತೀರಿ ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಬಸವಲಿಂಗಪ್ಪನವರು ಇಲ್ಲಿ ಇರಲಿ ಇಲ್ಲದೆ ಇರಲಿ ಅವರ ಹೆಸರು ಇಲ್ಲಿ ಬರಲೇಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ: ಮಾನ್ಯ ಸಿಂಧ್ಯರವರಿಗೂ ಅವರಿಗೂ ಬಹಳ ನೆಂಟಿಸ್ಥಿಕೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನನಗೆ ನೆಂಟಸ್ತನ ಇಲ್ಲ. ನೀವು ಸುಮ್ಮನೆ ಇಲ್ಲದೆ ಇರುವುದನ್ನೆಲ್ಲಾ ಕಲ್ಪಿಸಬೇಡಿ. ಈಗ ನನಗೆ ಇರುವುದೇ ಸಾಕಾಗಿದೆ. ಮೇವು ತರುವುದಕ್ಕೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ನಮಗೆ ಸ್ಪೆಸಿಫಿಕ್ ಆಗಿ ಹೇಳಬೇಕು. ಉತ್ತರ ಕನ್ನಡ, ದಕ್ಷಿಣ ಕನ್ನಡ ಕೊಡಗು, ಗುಲ್ಬರ್ಗ, ಬೀದರ್ ಈ 5 ಜಿಲ್ಲೆಗಳನ್ನು ಬಿಟ್ಟರೆ ಬಾಕಿ ಎಲ್ಲಾ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಇದೆ ಎಂದು ಹೇಳಿದ್ದೀರಿ. ಬೇರೆ ರಾಜ್ಯಗಳಿಂದ ಮೇವು ತರುವುದಕ್ಕೆ ತಾವು ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಏತಕ್ಕೆ ತೆಗೆದುಕೊಂಡಿಲ್ಲ? ನಿಮಗೆ ತೊಂದರೆ ಏನು? ಎನ್ನುವುದನ್ನು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇವತ್ತು ಇರುವ ಕಾಡೆಲ್ಲ ಸುಟ್ಟು ಹೋಗುತ್ತಿದೆ. ಮಾನ್ಯ ಶಂಭುನಾಥ್‌ರವರೇ ಇದು ನಿಮ್ಮ ದುರಾದೃಷ್ಟ. ಇವತ್ತು ಕಾಡೆಲ್ಲ ಹೋಗಿ ಸುಡಗಾಡು ಆಗುತ್ತಿದೆ. ಇದು ಸುಡಗಾಡು ಸರ್ಕಾರ ಎಂದು ನಾನು ಹೇಳುವುಕ್ಕಾಗುವುದಿಲ್ಲ, ಹೇಳಿದರೆ ನಿಮಗೆ ಕೋಪ ಬರುತ್ತದೆ. ಮೇವು ಸಂಗ್ರಹ ಮಾಡುವುದಕ್ಕೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ದಯಮಾಡಿ ಹೇಳಿ. ಈ ಕ್ರಮವನ್ನು ನೀವು ಬೇಗ ತೆಗೆದುಕೊಳ್ಳಬೇಕು. ಇಲ್ಲದೆಹೋದರೆ ಬಹಳ ತೊಂದರೆಯಾಗುತ್ತದೆ. ಮಾನ್ಯ ಕೆ.ಎಚ್. ಪಾಟೀಲ್ ರವರು ನಿನ್ನೆ ಹೇಳುತ್ತಿದ್ದರು. ರೈತರ ಸಾಲವನ್ನು 31ನೇ ತಾರೀಖು ಆದನಂತರ ವಸೂಲಿ ಮಾಡುತ್ತೇವೆ. ಎನ್ನುವ ಮಾತನ್ನು ಹೇಳಿದರು. ಕೇಂದ್ರ ಸರ್ಕಾರದಿಂದ ಪತ್ರ ಬರೆದಿದ್ದರೆ ಎಂದು. ಅದನ್ನು ಏನಾದರೂ ಅವರು ಮಾಡುವುದಕ್ಕೆ ಹೋದರೆ ಸುಟ್ಟ ಗಾಯದ ಮೇಲೆ ಉಪ್ಪು ಹಾಕಿದಂತೆ ಆಗುತ್ತದೆ. ತಾವು ಅದನ್ನು ಮಾಡುವುದಕ್ಕೆ ಹೋದರೆ ಲಾ ಅಂಡ್ ಪ್ರಾಬ್ಲಮ್ ರಾಜ್ಯದಲ್ಲಿ ಬರುತ್ತದೆ ಎನ್ನುವುದರಲ್ಲಿ ಯಾವುದೇ ಸಂಶಯ ಇಟ್ಟುಕೊಳ್ಳಬೇಡಿ. ಕೊ-ಆಪರೇಟಿವ್ ಸಾಲ ಕೊಟ್ಟಿರತಕ್ಕಂದಾದ್ದನ್ನು ಮರುಪಾವತಿ ಮಾಡಲಿಕ್ಕೆ ಕ್ರಮ

ತೆಗೆದುಕೊಳ್ಳಬೇಕು ಎನ್ನುವ ತತ್ವದಲ್ಲಿ ನಂಬಿಕೆ ಇಟ್ಟಿರತಕ್ಕಂಥವನ್ನು ನಾನು. ಇಲ್ಲದಿದ್ದರೆ ಸೊಸೈಟಿಗಳು ಹಾಳಾಗಿ ಹೋಗುತ್ತವೆ. ಆದರೆ ಇವತ್ತಿನ ಸಂದರ್ಭದಲ್ಲಿ ಅಲ್ಲ, ಇವತ್ತು ರೈತರು ಬಹಳ ತೊಂದರೆಯಲ್ಲಿದ್ದಾರೆ. ಅವರ ಬೆಳೆ ಎಲ್ಲಾ ನಾಶವಾಗಿದೆ. ಅವರಲ್ಲಿ ಮೂರುಕಾಸು ಇಲ್ಲ, ನೀವು ಏನಾದರೂ ಮಾರ್ಚಿ 31ರ ನಂತರ ಸಾಲ ವಸೂಲಿ ಮಾಡಲು ಹೋದರೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಕ್ರಿಯೇಟ್ ಆಗುವುದರಲ್ಲಿ ಯಾವುದೇ ಸಂಶಯ ಇಟ್ಟುಕೊಳ್ಳಬೇಡಿ.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಯ ಫಂಕ್ಷನ್ ಬಗ್ಗೆ

ನಿನ್ನೆ ದಿನ ಮತ್ತು ಈಗ ಈ ಸದನದಲ್ಲಿ ಬಹಳ ಚರ್ಚೆ ಮಾಡಿಬಿಟ್ಟಿದ್ದೇವೆ. ಇವತ್ತು ಏನು ಹಣವನ್ನು ಕೊಟ್ಟಿದ್ದಾರೆ ಅದು ಜಿಲ್ಲಾಪರಿಷತ್ತಿನಲ್ಲಿ ಸರ್ಕಾರ ಅಪ್ರೂವ್ ಮಾಡಿರತಕ್ಕಂಥ ರೆಗ್ಯುಲರ್ ಆಕ್ಷನ್ ಪ್ಲಾನ್‌ನಲ್ಲಿ ಇದ್ದಂಥಾ ದುಡ್ಡನ್ನು ಜೆ.ಆರ್.ವೈ. ಫಂಡ್ಸನ್ನು ಕುಡಿಯುವ ನೀರಿಗೋಸ್ಕರ ಎಂದು ನೀವು ಡೈವರ್ಟ್ ಮಾಡಿದ್ದೀರಿ. ಇದರಿಂದಾಗಿ ಏನಾಗಿದೆ? ಇವತ್ತು ಜಿಲ್ಲಾಪರಿಷತ್ತಿನ ಆಶ್ರಯದಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೋಡಬೇಕಾಗಿತ್ತೋ ಅಥವಾ ಮಿನಿ ವಾಟರ್ ಸಪ್ಲೈ ಮಾಡಬೇಕಾಗಿತ್ತೋ ಅದನ್ನು ಹೇಗೆ ಮಾಡುತ್ತಾರೆಂದು ನನಗೆ ಅರ್ಥವಾಗುತ್ತಿಲ್ಲ. ಇದನ್ನು ಡಿ.ಸಿ. ಯವರ ಮೂಲಕ ಮಾಡಿಸುತ್ತಿರೋ ಚೀಫ್ ಸೆಕ್ರೆಟರಿಯವರು ಮೂಲಕ ಮಾಡಿಸುತ್ತೀರೋ ಅದು ನನಗೆ ಸಂಬಂಧವಿಲ್ಲ. ಆದರೆ ನನಗೆ ಮುಖ್ಯವಾಗಿ ಅರ್ಥವಾಗದೇ ಇರತಕ್ಕಂಥಾದ್ದು ಏನೆಂದರೆ ನೀವು ಡಿ.ಸಿ.ಗಳಿಗೆ ಎಲ್ಲಾ ಕಡೆ ಹಣವನ್ನು ಕೊಟ್ಟಿದ್ದೀರಿ. ಡಿ.ಸಿ.ಯವರು ಯಾರ ಮೂಲಕ ಕೆಲಸ ಮಾಡಿಸುತ್ತಾರೆ? ಅವರು ಜಿಲ್ಲಾಪರಿಷತ್ತಿನ ಎಕ್ಸಿಕ್ಯುಟಿವ್ ಇಂಜಿನಿಯರ್ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜನಿಯರ್ ಮೂಲಕ ತಾನೇ ಕೆಲಸ ಮಾಡಿಸುವುದು? ಯಾವ ಕಾರಣದಿಂದ ಇದನ್ನು ಮಾಡಿದ್ದೀರಿ? ಅಂದರೆ ರಾಜಕೀಯ ಜಿಲ್ಲಾಪರಿಷತ್ತಿನಲ್ಲಿ ಮತ್ತು ಮಂಡಲ ಪಂಚಾಯಿತಿಗಳಲ್ಲಿ ನಿಮಗೆ ಬೆಂಬಲ ಕೊಡತಕ್ಕಂಥ ಹೆಚ್ಚಿನ ಪ್ರಧಾನರು ಮತ್ತು ಜಿಲ್ಲಾಪರಿಷತ್ತಿನ ಅಧ್ಯಕ್ಷರುಗಳು ಇಲ್ಲ ಎನ್ನುವ ಒಂದೇ ಕಾರಣದಿಂದ ಅದನ್ನು ಸ್ಥಗಿತ ಮಾಡಿದ್ದೀರಿ. ನೀವು ಮಂಡಲ ಪಂಚಾಯಿತಿಗಳಲ್ಲಿ ಏನು ಮಾಡಿದ್ದೀರಾ ಎಂದರೆ, ಜೆ.ಆರ್.ವೈ ಫಂಡ್ಸ್ ನ್ನು ನಿಲ್ಲಿಸಿರುವುದರಿಂದಾಗಿ ಇವತ್ತು ಎಲ್ಲಾ ಮಂಡಲ ಪಂಚಾಯಿತಿ ಪ್ರಧಾನರುಗಳು ನಿಮಗೆ ಶಾಪ ಹಾಕುತ್ತಿದ್ದಾರೆ. ಹಳ್ಳಿಗಳಲ್ಲಿ ಬಲ್ಬುಗಳನ್ನು ಹಾಕಿಸುವುದಕ್ಕೆ ಸಹಿತ ಅವರ ಹತ್ತಿರ ದುಡ್ಡಿಲ್ಲ ಎನ್ನುವುದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕು. ಈ ಪರಿಸ್ಥಿತಿಗೆ ನೀವು ತಂದಿದ್ದೀರಿ. ವಿದ್ಯುತ್ ಸರಬರಾಜು ಎಷ್ಟೊಂದು ಅವ್ಯವಸ್ಥೆಯಾಗಿದೆ? ಕಳೆದ ಒಂದು ವರ್ಷದಿಂದಲೂ ವಿದ್ಯುತ್ ಇಲಾಖೆ ಬಗ್ಗೆ ಚರ್ಚೆ ಮಾಡಿದ್ದೇವೆ. ನಮ್ಮ ಬೈರೇಗೌಡರು, ಮುಖ್ಯ ಮಂತ್ರಿಗಳ ಮನೆ ಮುಂದೆ ಕುಳಿತುಕೊಂಡು ಧರಣಿ ಮಾಡಿದ್ದಾರೆ. ಅದರಿಂದ ಏನೂ ಆಗಲಿಲ್ಲ, ಇವತ್ತು ವಿದ್ಯುತ್ತಿಗೂ ಬರಗಾಲಕ್ಕೂ ಏನು ಸಂಬಂಧ? ಮಿನಿ ವಾಟರ್ ಸಪ್ಲೈ ಇರತಕ್ಕಂಥ ಹಳ್ಳಿಗಳಲ್ಲಿ ಕರೆಂಟ್ ಇಲ್ಲದೆ ಹೋದರೆ ಕುಡಿಯಲಿಕ್ಕೆ ನೀರನ್ನು ಎಲ್ಲಿಂದ ತರುತ್ತಾರೆ. ಬೋರ್‌ವೆಲ್‌ಗಳು ಇರುವ ಹಳ್ಳಿಗಳಾದರೆ ಪರ್ವಾಗಿಲ್ಲ. ಆಮೇಲೆ ನೀರಾವರಿ ಪಂಪುಸೆಟ್ಟುಗಳಿಗೆ ಸರಿಯಾದ ವಿದ್ಯುಚ್ಛಕ್ತಿ ದೊರೆಯದೆ ಬಹಳ ಕಷ್ಟಪಡುತ್ತಿದ್ದಾರೆ. ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾದ ಮೇಲೆ ರೈತರುಗಳಿಗೆ ಕೊಟ್ಟಿರತಕ್ಕಂಥ ಸವಲತ್ತನ್ನು ಒಪ್ಪತಕ್ಕಂಥಾದ್ದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ರೈತರು ಏನು ಹೇಳುತ್ತಾರೆ ಅಂದರೆ ಆ ಸೌಲಭ್ಯ ನಮಗೆ ಬೇಕಾಗಿಲ್ಲ, ನಮಗೆ un-interrupted power supply ಮಾಡಬೇಕು ಎಂದು ಹೇಳುತ್ತಿದ್ದಾರೆ. ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಅಥವಾ ಮಧ್ಯಾಹ್ನ 12 ರಿಂದ ಸಾಯಂಕಾಲ 6 ಗಂಟೆಯವರೆಗೆ ಯಾವುದಾದರೂ 8 ಗಂಟೆ ಸಮಯ. un-interrupted power supply ಕೊಡುವುದಕ್ಕೆ ಈ ಸರ್ಕಾರಕ್ಕೆ ಏಕೆ